# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜೂನ್ 15, 2021

ಸಂಪುಟ : 48 ಸಂಚಿಕೆ : 32 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಕೊರೊನಾ ಸಾವಿಗೆ ಲಕ್ಷ ಪರಿಹಾರ

## 30 ಸಾವಿರದಷ್ಟು ಬಡ ಕುಟುಂಬದವರಿಗೆ ನೆರವು: ಮುಖ್ಯಮಂತ್ರಿ ಘೋಷಣೆ

ಬೆಂಗಳೂರು, ಜೂ. 14 - ಕೊರೊನಾದಿಂದ ಮೃತಪಟ್ಟ ಬಡ ಸದಸ್ಯರ ಕುಟುಂಬದವರಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದಾರೆ.

ಸೋಂಕು ಸರಪಳಿ ತಪ್ಪಿಸಲು ಕರ್ಫ್ಯೂ ಮತ್ತು ಲಾಕ್‌ಡೌನ್ ಜಾರಿ ನಂತರ ಶ್ರಮಿಕ ವರ್ಗಕ್ಕೆ ಈಗಾಗಲೇ ಎರಡು ಹಂತಗಳಲ್ಲಿ 1750 ಕೋಟಿ ರೂಪಾಯಿ ಪರಿಹಾರ ಘೋಷಿಸಿರುವ ಮುಖ್ಯಮಂತ್ರಿಯವರು, ಇಂದು ಮೂರನೇ ಹಂತದಲ್ಲಿ ಮತ್ತೆ 250 ರಿಂದ 300 ಕೋಟಿ ರೂ. ಪ್ಯಾಕೇಜ್ ಘೋಷಣೆ



ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಮುಖ್ಯಮಂತ್ರಿಯವರು, ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಪರಿಹಾರ ದೊರೆಯಲಿದೆ ಎಂದು ಸ್ಪಷ್ಟಪಡಿಸಿದರು.

ಬಡತನದ ರೇಖೆಗಿಂತ ಕೆಳಗಿರುವ ಹಾಗೂ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದಲ್ಲಿ ದುಡಿಯುವ ವಯಸ್ಕರು ಕೊರೊನಾ ಸೋಂಕಿಗೆ ಬಲಿಯಾಗಿದ್ದರೆ, ಅವರ ಹೆಸರಿನಲ್ಲಿ ಒಂದು ಲಕ್ಷ ರೂ. ಪರಿಹಾರವನ್ನು ಕುಟುಂಬದವರಿಗೆ ನೀಡಲಾಗುವುದು.

ಸೋಂಕಿಗೆ 25 ರಿಂದ 30 ಸಾವಿರ ಬಡ ಕುಟುಂಬದ ದುಡಿಯುವರು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಇದೆ. ಇದನ್ನು ಆಧಾರವಾಗಿಟ್ಟುಕೊಂಡು ಪರಿಹಾರ ನೀಡಲಾಗುವುದು ಎಂದವರು ಹೇಳಿದ್ದಾರೆ.

ಇದರಿಂದ ನೊಂದ ಕುಟುಂಬದವರಿಗೆ ತಾತ್ಕಾಲಿಕವಾಗಿ ಜೀವನ ನಡೆಸಲು ಇಲ್ಲವೇ ಸಣ್ಣಪುಟ್ಟ ಬಂಡವಾಳ ಹೂಡಿಕೆ ಮಾಡಿಕೊಳ್ಳಲು ಅನುವಾಗುತ್ತದೆ ಎಂಬ ದೃಷ್ಟಿಯಿಂದ ಇಂತಹ ತೀರ್ಮಾನ ಕೈಗೊಂಡಿದ್ದೇನೆ. ಈಗಾಗಲೇ ಶ್ರಮಿಕ ವರ್ಗಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 1750 ಕೋಟಿ ರೂ. ಬಿಡುಗಡೆ ಮಾಡಿದ್ದು, ಈಗಾಗಲೇ ಅರ್ಹ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಲು ಆರಂಭವಾಗಿದೆ ಎಂದರು.

ಇಷ್ಟು ಮೊತ್ತದ ಪರಿಹಾರ ನೀಡಲು ರಾಜ್ಯದ ಹಣಕಾಸು ಸ್ಥಿತಿ ಉತ್ತಮವಾಗಿದೆಯೇ? ಎಂದು ಕೇಳಿದ ಪ್ರಶ್ನೆಗೆ ಹಣಕಾಸು ಪರಿಸ್ಥಿತಿ ಇರುವುದರಲ್ಲಿ ಉತ್ತಮವಾಗಿದೆ. ಆದ್ದರಿಂದ ಪರಿಹಾರ ನೀಡಲು ಸಾಧ್ಯವಾಗಿದೆ.

ರಾಷ್ಟ್ರದಲ್ಲಿ ಯಾವುದೇ (2ನೇ ಪುಟಕ್ಕೆ)

# 19 ಜಿಲ್ಲೆಗೆ ಬಿತ್ತನೆ ಬೀಜಗಳ ಕಿಟ್

ಬೆಂಗಳೂರು, ಜೂ. 14 - ತೊಗರಿ, ಹೆಸರು, ಶೇಂಗಾ, ಸೋಯಾ ಅವರೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಉತ್ತೇಜನ ನೀಡಲು ರೈತರಿಗೆ ಪ್ರಮುಖವಾಗಿ ಬೆಳೆಯುವ 19 ಜಿಲ್ಲೆಗಳಲ್ಲಿ ಬಿತ್ತನೆ ಬೀಜಗಳ ಮಿನಿಕಿಟ್ ರೂಪದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (ಎನ್.ಎಫ್.ಎಸ್.ಎಂ) ಯೋಜನೆಯಡಿ ರೈತರಿಗೆ ಉಚಿತವಾಗಿ ಬಿತ್ತನೆ ಬೀಜಗಳನ್ನು ನೀಡಲಾಗುತ್ತಿದ್ದು, ಇಲ್ಲಿಯವರೆಗೆ 12.60 ಕೋಟಿ ರೂ. ಮೌಲ್ಯದ ಮಿನಿ ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್.ಎಫ್.ಎಸ್.ಎಂ. ಯೋಜನೆಯಡಿ 4 ಕೆಜಿ ತೊಗರಿಯನ್ನು 16 ಜಿಲ್ಲೆಗಳಿಗೆ, 4 ಕೆ.ಜಿ.ಹೆಸರು 4 ಜಿಲ್ಲೆಗಳಿಗೆ 20 ಕೆ.ಜಿಯಂತೆ 8 ಜಿಲ್ಲೆಗಳಿಗೆ ಹಾಗೂ 8 ಕೆ.ಜಿಯಂತೆ 2 ಜಿಲ್ಲೆಗಳಿಗೆ ಸೋಯಾ ಅವರೆಗಳ ಮಿನಿಕಿಟ್‌ಗಳನ್ನು ವಿತರಿಸಲಾಗಿದ್ದು, ಮಿಶ್ರಬೆಳೆಗಳನ್ನು ಬೆಳೆಯಲು ಸಹ ಈ ಅಭಿಯಾನದಡಿ ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

2020-21 ನೇ ಸಾಲಿನಲ್ಲಿ 153.08 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಾಗಿದ್ದು, ದೇಶದ ಸರಾಸರಿಗೆ ಹೋಲಿಸಿದಲ್ಲಿ ಶೇ.2 ರಷ್ಟು ಹಾಗೂ ರಾಜ್ಯದ ಸರಾಸರಿಗೆ ಇದನ್ನು ಹೋಲಿಸಿದರೆ ಕರ್ನಾಟಕದಲ್ಲಿ ಶೇ.10 ರಷ್ಟು ಹೆಚ್ಚಿನ ಆಹಾರ ಧಾನ್ಯಗಳ ಉತ್ಪಾದನೆಯಾಗಿದೆ.

ಕೋವಿಡ್ ಸಂಕಷ್ಟದಲ್ಲಿಯೂ ಕೂಡ ಕಳೆದ ಬಾರಿ ದಾಖಲೆಯ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಾಗಿರುವುದನ್ನು ನೋಡಿದರೆ ಕೃಷಿಯತ್ತ ಜನರ ಒಲವು ಹಾಗೂ ಕೋವಿಡ್ ಅವಧಿಯಲ್ಲಿಯೂ ಸಹ ರೈತರ ಶ್ರಮಕ್ಕೆ ಇದು ಸಾಧನೆಯಾಗಿದೆ ಎಂದು ಪಾಟೀಲ್ ತಿಳಿಸಿದರು.

ಮುಂಗಾರು ಹಂಗಾಮಿಗೆ 77 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಯಿದ್ದು, ಇಲ್ಲಿಯವರೆಗೆ 11.73 ಲಕ್ಷ ಹೆಕ್ಟೇರ್ ಬಿತ್ತನೆ ಅಂದರೆ (2ನೇ ಪುಟಕ್ಕೆ)

# ಇಂದಿನಿಂದ ಶೈಕ್ಷಣಿಕ ವರ್ಷಾರಂಭ

## ಸಂಕಷ್ಟದಲ್ಲಿ ಖಾಸಗಿ ಶಾಲೆಗಳು, ಶುಲ್ಕ ಕಟ್ಟುವ ಗೊಂದಲದಲ್ಲಿ ಪೋಷಕರು

ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ, ಜೂ.14- ಕೊರೊನಾ ಎರಡನೇ ಅಲೆಯ ಸಂಕಷ್ಟ ಹಾಗೂ 3ನೇ ಅಲೆಯ ಭೀತಿ ನಡುವೆಯೇ ಶಾಲೆಗಳು ಆರಂಭವಾದರೆ ಸಾಕು ಎನ್ನುತ್ತಿದ್ದ ಪೋಷಕರು, ಇದೀಗ ಶಾಲಾ ಶುಲ್ಕ ಭರಿಸುವಲ್ಲಿ ಗೊಂದಲಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಶೇ.70ರಷ್ಟು ಶುಲ್ಕ ಮಾತ್ರ ಪಡೆಯುವಂತೆ ಖಾಸಗಿ ಶಾಲಾ ಶಿಕ್ಷಣ ಮಂಡಳಿಗಳಿಗೆ ಸರ್ಕಾರ ಆದೇಶ ನೀಡಿತ್ತು. ಆದರೆ ಆ ಆದೇಶ ಈ ವರ್ಷಕ್ಕಲ್ಲ ಎನ್ನುತ್ತಿರುವ ಶಿಕ್ಷಣ ಸಂಸ್ಥೆಗಳು ಪೂರ್ತಿ ಶುಲ್ಕ ಕೇಳಲಾರಂಭಿಸಿವೆ. ಈ ಹಗ್ಗ-ಜಗ್ಗಾಟ ಪೋಷಕರ ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ.



ಮಕ್ಕಳ ಭವಿಷ್ಯಕ್ಕಾಗಿ ಎಷ್ಟೇ ಶುಲ್ಕವಾದರೂ ಸರಿ ನೀಡಿ ಅತ್ಯುತ್ತಮ ಶಾಲೆಗೆ ಸೇರಿಸುತ್ತೇವೆಂಬ ಪೋಷಕರು, ಈಗಾಗಲೇ ಹಣ ಹಿಡಿದು ನೋಂದಣಿಗೆ ತುದಿಗಾಲ ಮೇಲೆ ನಿಂತಿದ್ದಾರೆ. ಆದರೆ ಮೊದಲ ಹಾಗೂ ಎರಡನೇ ಕೊರೊನಾ ಅಲೆಗಳಲ್ಲಿ ಮುಳುಗೆದ್ದ ಬಡ ಹಾಗೂ ಮಧ್ಯಮ ವರ್ಗದ ಪೋಷಕರಿಗೆ ಶುಲ್ಕ ಭರಿಸುವುದು ಸವಾಲಿನ ಕೆಲಸವಾಗಿದೆ.

ಏತನ್ಮಧ್ಯೆ ಸರ್ಕಾರ 2021-22 ನೇ ಸಾಲಿನ ಶೈಕ್ಷಣಿಕ ವರ್ಷ ಜೂ. 15ರಿಂದ ಆರಂಭವಾಗಲಿದ್ದು, ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದೆ.

ಶಿಕ್ಷಕರು ಶಾಲೆಗಳಿಗೆ ತೆರಳಿ ಸ್ವಚ್ಛತೆ, ಪ್ರವೇಶ ಪ್ರಕ್ರಿಯೆ ಸೇರಿದಂತೆ ಶಾಲಾ ಆರಂಭಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದೆ. ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಲು ಆಗಸ್ಟ್ 30ರವರೆಗೆ ಕಾಲಾವಕಾಶವನ್ನೂ ನೀಡಿತ್ತು. ಆದರೆ ದಾವಣಗೆರೆ ಸೇರಿ 11 ಜಿಲ್ಲೆಗಳಲ್ಲಿ ಲಾಕ್‌ಡೌನ್ ಮುಂದುವರಿದ ಪರಿಣಾಮ ಲಾಕ್‌ಡೌನ್ ನಂತರ ಶಿಕ್ಷಕರು ಶಾಲೆಗೆ ತೆರಳುವಂತೆ ಮಾರ್ಪಾಡು ಮಾಡಿ ಸೋಮವಾರ ಆದೇಶ ಹೊರಡಿಸಿದೆ.

ಸೋಮವಾರ ದಾವಣಗೆರೆ ನಗರದ ಬಹುತೇಕ (2ನೇ ಪುಟಕ್ಕೆ)

# ಇಂದಿನಿಂದ 6-12 ವರ್ಷದ ಮಕ್ಕಳ ಮೇಲೆ ಕೋವ್ಯಾಕ್ಸಿನ್ ಪರೀಕ್ಷೆ

ನವದೆಹಲಿ, ಜೂ. 14 - ದೇಶೀಯವಾಗಿ ರೂಪಿಸಲಾದ ಕೋವ್ಯಾಕ್ಸಿನ್ ಲಸಿಕೆಯನ್ನು 6ರಿಂದ 12 ವರ್ಷದ ಮಕ್ಕಳಿಗೆ ಪರೀಕ್ಷಿಸುವ ಪ್ರಕ್ರಿಯೆ ಇಲ್ಲಿನ ಎ.ಐ.ಐ.ಎಂ.ಎಸ್.ನಲ್ಲಿ ಮಂಗಳವಾರದಿಂದ ಆರಂಭವಾಗಲಿದೆ. ಇದಾದ ನಂತರ 2-6 ವರ್ಷದ ಮಕ್ಕಳ ಮೇಲೆ ಲಸಿಕೆ ಪ್ರಯೋಗ ಮಾಡಲಾಗುವುದು. 12-18 ವರ್ಷದ ಮಕ್ಕಳನ್ನು ಕೋವ್ಯಾಕ್ಸಿನ್ ಪರೀಕ್ಷೆಗೆ ಈಗಾಗಲೇ ಒಳಪಡಿಸಲಾಗಿದೆ. ಅವರು ಮೊದಲ ಡೋಸ್ ಅನ್ನು ಎ.ಐ.ಐ.ಎಂ.ಎಸ್.ನಲ್ಲಿ ಪಡೆದಿದ್ದಾರೆ.

2ರಿಂದ 18 ವರ್ಷದ 175 ಮಕ್ಕಳನ್ನು ಮೂರು ಗುಂಪುಗಳಲ್ಲಿ ಲಸಿಕೆ ಪರೀಕ್ಷೆಗೆ ಒಳಪಡಿಸಲಾಗುವುದು.

# 12ನೇ ತರಗತಿ ಮೌಲ್ಯಮಾಪನ ಮಾನದಂಡ ಅಂತಿಮವಾಗಿಲ್ಲ

ನವದೆಹಲಿ, ಜೂ. 14 – ಸಿ.ಬಿ.ಎಸ್.ಇ. 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಲಾಗಿದೆಯಾದರೂ, ವಿದ್ಯಾರ್ಥಿಗಳ ಅರ್ಹತೆಯ ಮೌಲ್ಯಮಾಪನ ಯಾವ ರೀತಿ ಮಾಡಬೇಕು ಎಂಬುದು ಇನ್ನೂ ಅಂತಿಮಗೊಂಡಿಲ್ಲ. ಇದಕ್ಕಾಗಿ ಸಿ.ಬಿ.ಎಸ್.ಇ. ರೂಪಿಸಿದ್ದ ಸಮಿತಿ ಇನ್ನೂ ತನ್ನ ವರದಿ ಸಲ್ಲಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ಉದ್ದೇಶಕ್ಕಾಗಿ 13 ಸದಸ್ಯರ ಸಮಿತಿಯನ್ನು (2ನೇ ಪುಟಕ್ಕೆ)






# 'ನೀವು ಇದ್ದಲ್ಲಿಂದಲೇ ನನ್ನನ್ನು ಹಾರೈಸಿ' : ಎಸ್ಸೆಸ್

ದಾವಣಗೆರೆ,ಜೂ.14- ಅಖಿಲ ಭಾರತ ವೀರಶೈವ ಮಹಾಸಭಾದ



ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ನಾಡಿದ್ದು ದಿನಾಂಕ 16ರ ಬುಧವಾರ 90 ವರ್ಷಗಳನ್ನು ಪೂರೈಸಿ 91ನೇ ವರ್ಷಕ್ಕೆ ಪಾದಾರ್ಪಣೆ ಮಾಡಲಿದ್ದಾರೆ.

ಈ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಎಸ್ಸೆಸ್, ಎಲ್ಲರ ಹಾರೈಕೆ ಮತ್ತು (2ನೇ ಪುಟಕ್ಕೆ)


# ಪೆಟ್ರೋಲ್, ಡೀಸೆಲ್ ಬೆಲೆ ಮತ್ತೆ ಹೆಚ್ಚಳ

ನವದೆಹಲಿ, ಜೂ. 14 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಸೋಮವಾರ ಮತ್ತೆ ಹೆಚ್ಚಿಸಲಾಗಿದೆ. ಪೆಟ್ರೋಲ್ ಬೆಲೆ 29 ಪೈಸೆ ಹಾಗೂ ಡೀಸೆಲ್ ಬೆಲೆ 30 ಪೈಸೆ ಹೆಚ್ಚಳವಾಗಿದೆ.

ಕಳೆದ ಆರು ವಾರಗಳಲ್ಲಿ 24 ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ಇದರಿಂದಾಗಿ ದೇಶಾದ್ಯಂತ ತೈಲ ಬೆಲೆ ದಾಖಲೆ ಹಂತಕ್ಕೆ ತಲುಪಿದೆ. ರಾಜಸ್ಥಾನದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ದರಗಳೆರಡೂ ಲೀಟರ್‌ಗೆ 100 ರೂ.ಗಳ ಗಡಿ ದಾಟಿವೆ.

# ಲಾಕ್‌ಡೌನ್ ನಂತರವೇ ಶಿಕ್ಷಕರು ಶಾಲೆಗೆ

ಬೆಂಗಳೂರು, ಜೂ. 14 - ಶಾಲಾರಂಭದ ಕುರಿತು ಈಗಾಗಲೇ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗಿದೆಯಾದರೂ, ಕೆಲ ಜಿಲ್ಲೆಗಳಲ್ಲಿ ಇನ್ನೂ ಲಾಕ್‌ಡೌನ್ ಜಾರಿಯಲ್ಲಿದೆ. ಹೀಗಾಗಿ ಶಿಕ್ಷಕರು ಲಾಕ್‌ಡೌನ್ ತೆರವಾದ ದಿನದಿಂದ (2ನೇ ಪುಟಕ್ಕೆ)




## ದೊಡ್ಡಬೂದಿಹಾಳು ಗ್ರಾಮದ ಶತಾಯುಷಿ ಗೌಡ್ರ ಗುರುಬಸಮ್ಮ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬೂದಿಹಾಳು ಗ್ರಾಮದ ವಾಸಿ,
ದಿ॥ ಪಟೇಲ್ ಸಿದ್ದಬಸಪ್ಪನವರ ಧರ್ಮಪತ್ನಿ
**ಶತಾಯುಷಿ ಗೌಡ್ರ ಗುರುಬಸಮ್ಮ** ಇವರು
ದಿನಾಂಕ 14.06.2021ರ ಸೋಮವಾರ ರಾತ್ರಿ 7.30 ಕ್ಕೆ ನಿಧನರಾದರೆಂದು
ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 104 ವರ್ಷ ವಯಸ್ಸಾಗಿತ್ತು.
ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು,
ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.06.2021ರ ಮಂಗಳವಾರ
ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು
ದೊಡ್ಡಬೂದಿಹಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
**ಗೌಡ್ರ ಸಿದ್ದರಾಮಪ್ಪ ಮತ್ತು ಸಹೋದರರು, ಮಕ್ಕಳು ಹಾಗೂ ದೊಡ್ಡಬೂದಿಹಾಳು ಗ್ರಾಮಸ್ಥರು.**

**ಜೈ ಶ್ರೀಮನ್ನಾರಾಯಣ**
**ವಿಕಾಸ ತರಂಗಿಣಿ, ದಾವಣಗೆರೆ**
**ಸ್ಫೂರ್ತಿ ಸೇವಾ ಟ್ರಸ್ಟ್**
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
**ಡಿ.ಟಿ.ಎನ್ ನಾರಾಯಣಸ್ವಾಮಿ ಮತ್ತು ಕುಟುಂಬ ವರ್ಗದವರ ಸೇವಾರ್ಥ**
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಸೈಟುಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ, ಸಿದ್ದವೀರಪ್ಪ ಬಡಾವಣೆಯಲ್ಲಿ 40x60 ಉತ್ತರ, ಆಂಜನೇಯ ಬಡಾವಣೆಯಲ್ಲಿ 40x65 ಉತ್ತರ
**ಸ್ವಾಮಿ ಏಜೆಂಟ್, ವಿದ್ಯಾನಗರ**
**97421-44715**

**ಸೈಟು ಮಾರಾಟಕ್ಕೆ (ಉತ್ತರ)**
ಶಾಮನೂರು ಡಾಲರ್ಸ್ ಕಾಲೋನಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ)
40x58 ಉತ್ತರ.
**ಬೂಸ್ನೂರ್ ಕಿರಣ್** (ಏಜೆಂಟ್)
(ನೇರವಾಗಿ ರಿಜಿಸ್ಟರ್ ಮಾಲೀಕರಿಂದ ಹಾಗೂ ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ಗೆ)
**ಆಫೀಸ್ ನಂ. 97315-63409, 98440-63409**

**ಶಿಕ್ಷಕರು ಬೇಕಾಗಿದ್ದಾರೆ**
BA. D.Ed./BA. B.Ed. ಹಾಗೂ B.Sc. B.Ed. ಆಗಿರುವ English, Mathematics and Science ವಿಷಯಗಳ ಬೋಧನೆ ಮಾಡುವ ನುರಿತ ಶಿಕ್ಷಕರು ಬೇಕಾಗಿದ್ದಾರೆ.
ಶ್ರೀಮಾತಾ ವಿದ್ಯಾಸಂಸ್ಥೆ (ರಿ.)
**ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ,**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಆಫೀಸ್ ಹಿಂಭಾಗ, ದಾವಣಗೆರೆ.
**ಮೊ. : 99640 17729**

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನ ದಾಸೋಹ ದಾಸೋಹಿಗಳು
**ದಯಾಮರಣ ಚಳುವಳಿಯ ನಾಯಕಿ**
**ಶ್ರೀಮತಿ ಹೆಚ್. ಬಿ. ಕರಿಬಸಮ್ಮನವರು.**
**ದಾವಣಗೆರೆ.**
ಧನ ಸಹಾಯ ಮಾಡುವವರು ಸಂಪರ್ಕಿಸಿ
**91104 55199**

**ಆರೋಗ್ಯ, ಆನಂದ, ಆತ್ಮ ವಿಶ್ವಾಸ ಹೆಚ್ಚಿಸಿಕೊಳ್ಳಲು ಒಂದು ಅವಕಾಶ.**
ಸಂಪರ್ಕಿಸಿ: **63613 52381**
**91104 55199**

**ಸಾವಯವ ಗೊಬ್ಬರ ಸಿಗುತ್ತದೆ**
ನಮ್ಮಲ್ಲಿ ಅಲ್ಪಾವಧಿ ಹಾಗೂ ದೀರ್ಘಾವಧಿ ಎಲ್ಲಾ ಬೆಳೆಗಳಿಗೆ ಉತ್ತಮವಾದ ಸಾವಯವ ಗೊಬ್ಬರ ಸಿಗುತ್ತದೆ.
**ಮೊ : 81974 92172**

**ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ**
**ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ**
**ಫೋನ್ ನಂ:**
**74118 62216**

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
**ಸುಬ್ರಮಣಿ ಆಗ್ರೋಟೆಕ್**
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
**94484 39639, 63665 96479**

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
**98443 60459, 87220 14318**
**95352 69849**

**ನಾಟಿ ಕೋಳಿ ಮೊಟ್ಟೆ ದೊರೆಯುತ್ತದೆ**
Original Nati Eggs
**90666 37770**
**98456 18890**

**ತೆಂಗಿನ ಸಸಿಗಳು ಸಿಗುತ್ತವೆ**
1 ವರ್ಷ ಮತ್ತು ಎರಡುವರೆ ವರ್ಷಗಳ ತೆಂಗಿನ ಸಸಿಗಳು ಮತ್ತಿ ಗ್ರಾಮದಲ್ಲಿ ಸಿಗುತ್ತವೆ.
ಸಂಪರ್ಕಿಸಿ : **99451 59582**

**ಸೈಟ್ ಮಾರಾಟಕ್ಕಿದೆ**
20x34.5 ಅಳತೆಯ, (1200 ರೂ ಚದರ ಅಡಿಗೆ) ಸೈಟ್ ದಾವಣಗೆರೆ ಪಿ.ಬಿ ರಸ್ತೆ, ಬಾತಿ ಮಿಲ್ಕ್ ಡೈರಿ ಹತ್ತಿರ ಮಾರಾಟಕ್ಕಿದೆ.
**99005 47328**

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
ವಿಳಾಸ: ಸೋಮಶೇಖರ್
Unique Security Service
1st Floor, Hebbar Complex, K.B. Extn, Trishul Theater Road, Davanagere-577005
**98803 37686**

**ಬೇಕಾಗಿದ್ದಾರೆ**
**ಗೊಲ್ಲ ಜನಾಂಗ ಮಹಿಳಾ ಸ್ವಸಹಾಯ ಸಂಘ (ರಿ.)**
ಸಂಘದ ಕೆಲಸಕ್ಕೆ ಗೊಲ್ಲ ಜನಾಂಗದ ಮಹಿಳೆಯರು ಬೇಕಾಗಿದ್ದಾರೆ.
**99456 82243**

**ಸೈಟು ಮಾರಾಟಕ್ಕಿದೆ**
**ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)**
**ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್**
ಮೊ. : **97424 34049**

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.**
**ಅತ್ಯುತ್ತಮ ಸೇವೆಗೆ ಸಂಪರ್ಕಿಸಿ**
**9986361250**
**9113285992**

**ಮನೆ ಬಾಡಿಗೆಗೆ ಇದೆ**
ಗೌರಮ್ಮ ನಿಲಯ, 4ನೇ ಮೇನ್, 4ನೇ ಕ್ರಾಸ್, ಆಂಜನೇಯ ಬಡಾವಣೆ, ಸವಿಡೈನ್ ಹೋಟೆಲ್ ಹತ್ತಿರ, ನೇತ್ರಾವತಿ ಹಾಸ್ಟೆಲ್ ಹತ್ತಿರ, ನೆಲಮಹಡಿ, 1 ರೂಮಿನ ಮನೆ ಆಫೀಸ್/ಬ್ಯಾಚುಲರ್ಸ್‌ಗೆ ಬೋರ್/ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ.
**99163 29927**

**MNC SOFTWARE & BPO**
New Branch in Davangere Dist any Degree freshers Can apply
**98444 92888**

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇ ಔಟ್, ಬಿ ಬ್ಲಾಕ್, 4ನೇ ಮುಖ್ಯರಸ್ತೆ, 10ನೇ ಅಡ್ಡ ರಸ್ತೆಯಲ್ಲಿ ಮುನ್ಸಿಪಲ್ ಹಾಗೂ ಬೋರ್ ನೀರಿನ ವ್ಯವಸ್ಥೆ ಇರುವ 3 ಬೆಡ್ ರೂಂನ ಮನೆ ಬಾಡಿಗೆಗಿದೆ.
**98442 01186**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ಬಿಜೆಪಿ ಸರ್ಕಾರ ಹಗಲು ದರೋಡೆ ಮಾಡುತ್ತಿದೆ



## ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ಆಕ್ರೋಶ

ದಾವಣಗೆರೆ, ಜೂ 14 - ತೈಲ ಬೆಲೆಗಳನ್ನು ಏರಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್.ಬಸವಂತಪ್ಪ ನೇತೃತ್ವದಲ್ಲಿ ಕಾಂಗ್ರೆಸ್ ನಿಂದ ಮಾಯಕೊಂಡದ ಪೆಟ್ರೋಲ್ ಬಂಕ್ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಸವಂತಪ್ಪ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೈಲ ಬೆಲೆಗಳನ್ನು ಹೆಚ್ಚಳ ಮಾಡುವುದರ ಮುಖಾಂತರ ಹಗಲು ದರೋಡೆ ಮಾಡುತ್ತಿವೆ. ತೈಲ ಬೆಲೆ ಹೆಚ್ಚಳದಿಂದ ರೈತರ ಜೀವನ ಅಸ್ತವ್ಯಸ್ತವಾಗಿದ್ದು, ಜಮೀನು ಉಳುಮೆ ಮಾಡಲು ಟ್ರ್ಯಾಕ್ಟರ್ ದರವೂ ಹೆಚ್ಚಳವಾಗಿದೆ. ಇದರಿಂದ ರೈತರು ಉಳುಮೆ ಮಾಡದೇ ಇರುವಂತಹ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಸರ್ಕಾರ ಈ ಕೂಡಲೇ ಎಲ್ಲಾ ಗೃಹ ಬಳಕೆ ವಸ್ತುಗಳ ಬೆಲೆಗಳನ್ನು ಇಳಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಎಸ್ಟಿ ಘಟಕದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜೇಂದ್ರ, ಕಾಂಗ್ರೆಸ್ ಹಿರಿಯ ಮುಖಂಡ ರುದ್ರೇಶ್, ಗ್ರಾಪಂ ಮಾಜಿ ಅಧ್ಯಕ್ಷ ಲಕ್ಷ್ಮಣರಾವ್, ಅಣ್ಣಾಪುರದ ಹೇಮಣ್ಣ, ನರೇನಳ್ಳಿ ರುದ್ರೇಶ್, ಪರಶುರಾಮ ಮತ್ತಿತರರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

# ಕೊರೊನಾ : ಸಕ್ರಿಯ ಸೋಂಕಿತರು ಹತ್ತು ಲಕ್ಷಕ್ಕೂ ಕಡಿಮೆ

ನವದೆಹಲಿ, ಜೂ. 14 - ದೇಶದಲ್ಲಿ ಸೋಮವಾರ 70,421 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದು 74 ದಿನಗಳಲ್ಲೇ ಅತಿ ಕಡಿಮೆಯಾಗಿದೆ. ಇದೇ ದಿನ ಸಕ್ರಿಯ ಸೋಂಕಿತರ ಸಂಖ್ಯೆ ಎರಡು ತಿಂಗಳ ನಂತರ ಹತ್ತು ಲಕ್ಷಕ್ಕೂ ಕಡಿಮೆ ಹಂತಕ್ಕೆ ಬಂದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೊರೊನಾದಿಂದ ಒಂದೇ ದಿನ 3,921 ಜನರು ಸಾವ್ನನಪ್ಪಿದ್ದು, ಒಟ್ಟು ಮೃತರ ಸಂಖ್ಯೆ 3.74 ಲಕ್ಷಕ್ಕೆ ತಲುಪಿದೆ.

ಒಂದೇ ದಿನದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 53 ಸಾವಿರದಷ್ಟು ಕಡಿಮೆಯಾಗಿದೆ. ಪಾಸಿಟಿವ್ ದರ ಶೇ.4.72ರಷ್ಟಿದೆ ಎಂದು ಸಚಿವಾಲಯ ಹೇಳಿದೆ.

# ಇಂದಿನಿಂದ ಶೈಕ್ಷಣಿಕ ವರ್ಷಾರಂಭ

**(1ನೇ ಪುಟದಿಂದ)** ಶಾಲೆಗಳಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಪೋಷಕರೂ ಸಹ ಶುಲ್ಕದ ಬಗ್ಗೆ ವಿಚಾರಿಸಲಾರಂಭಿಸಿದ್ದಾರೆ.

**ಸಂಕಷ್ಟದಲ್ಲಿ ಎರಡನೇ ಹಂತದ ಖಾಸಗಿ ಶಿಕ್ಷಣ ಸಂಸ್ಥೆಗಳು:** ಸರ್ಕಾರ ಆದೇಶಿಸಿದರೆ ಈ ವರ್ಷವೂ ನಾವು ಶೇ.70ರಷ್ಟು ಶುಲ್ಕ ಪಡೆಯಲು ಸಿದ್ಧರಿದ್ದೇವೆ. ಆದರೆ ಶೇ.70ರಷ್ಟು ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಕಟ್ಟುವಂತೆ ಪೋಷಕರಿಗೂ ಮನವಿ ಮಾಡಬೇಕು ಎಂದು ರೂಪ್ಸಾ (ರಾಜ್ಯ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಆಡಳಿತ ಮಂಡಳಿಗಳ ಒಕ್ಕೂಟ) ಉಪಾಧ್ಯಕ್ಷ ಮಂಜುನಾಥ ಅಗಡಿ ಒತ್ತಾಯಿಸಿದ್ದಾರೆ.

ಕಳೆದ ವರ್ಷ ಸರ್ಕಾರದ ಆದೇಶದಂತೆ ಶೇ.70ರಷ್ಟು ಶುಲ್ಕ ಪಡೆಯಲು ಸಿದ್ಧರಿದ್ದೆವು. ಆದರೆ ಬಹುತೇಕ ಶಾಲೆಗಳಲ್ಲಿ ಪೋಷಕರು ಶೇ.10ರಷ್ಟು ಶುಲ್ಕವನ್ನೂ ಭರಿಸಿಲ್ಲ. ಆದಾಗ್ಯೂ ನಾವು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗೆ ನೀಡಬೇಕಾದ ಶಿಕ್ಷಣ ಸೌಲಭ್ಯ ಒದಗಿಸಿದ್ದೇವೆ. ಶಿಕ್ಷಕರಿಗೆ ವೇತನ ನೀಡಿದ್ದೇವೆ ಎಂದರು.

ಕಾರ್ಪೋರೇಟ್ ಶಾಲೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಸಾವಿರಾರು ಬಜೆಟ್ ಶಾಲೆಗಳು ತೀವ್ರ ಸಂಕಷ್ಟದಲ್ಲಿವೆ. ಬಜೆಟ್ ಶಾಲಾ ಸಂಸ್ಥೆಗಳ ಕಾರ್ಯದರ್ಶಿಗಳು, ಅಧ್ಯಕ್ಷರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಸರ್ಕಾರ ನಿಗದಿತ ಶುಲ್ಕವನ್ನಾದರೂ ಪೂರ್ಣವಾಗಿ ಕಟ್ಟುವಂತೆ ಪೋಷಕರಿಗೆ ಸೂಚಿಸಬೇಕು ಎಂದರು.

ಕೆಲವೇ ಕಾರ್ಪೋರೇಟ್ ಶಾಲೆಗಳು ಲಕ್ಷಗಟ್ಟಲೆ ಶುಲ್ಕ ಪಡೆಯುವುದನ್ನು ಕಂಡು ಇಡೀ ಖಾಸಗಿ ಶಿಕ್ಷಣ ಸಂಸ್ಥೆಗಳೆಲ್ಲಾ ಹೆಚ್ಚು ಶುಲ್ಕ ಪಡೆಯುತ್ತಿವೆ ಎಂದು ದೂರುವುದು ಸರಿಯಲ್ಲ ಎಂದ ಮಂಜುನಾಥ್, ಆಯಾ ಪ್ರದೇಶಗಳಿಗನುಗುಣವಾಗಿ ಖಾಸಗಿ ಶಾಲೆಗಳು ಕಡಿಮೆ ಶುಲ್ಕ ನಿರ್ಧರಿಸಿವೆ. ಕಂತಿನ ರೂಪದಲ್ಲೂ ಶುಲ್ಕ ಪಡೆಯುತ್ತಿವೆ.

ಆದರೆ ಪೋಷಕರು ಶುಲ್ಕ ಕಟ್ಟದ ಪರಿಣಾಮ ಶಿಕ್ಷಕರಿಗೆ ವೇತನ ನೀಡಲಾಗದೆ, ಪಾಠ ಮಾಡುತ್ತಿದ್ದ ಶಿಕ್ಷಕರು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಆದ್ದರಿಂದ ಕಾರ್ಪೋರೇಟ್ ಶಾಲೆಗಳ ಕಾನೂನನ್ನು ಬಜೆಟ್ ಶಾಲೆ ಮೇಲೆ ಹಾಕುವ ಮೂಲಕ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ ಉಳ್ಳವರು ಮಾತ್ರ ಶಿಕ್ಷಣ ಸಂಸ್ಥೆ ನಡೆಸುವಂತಾಗಿದೆ ಎಂದರು.

ಜಿಲ್ಲೆಯಲ್ಲಿ 424 ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 143 ಪ್ರೌಢಶಾಲೆಗಳು ಸೇರಿ ಒಟ್ಟು 567 ಶಾಶ್ವತ ಅನುದಾನ ರಹಿತ ಶಾಲೆಗಳಿವೆ.

ಇವುಗಳಲ್ಲಿ ಮೊದಲ ಹಂತದ ಖಾಸಗಿ ಶಾಲೆಗಳು ಪೂರ್ಣ ಶುಲ್ಕ ಕಟ್ಟಿಸಿಕೊಳ್ಳುತ್ತಿವೆ. ಆದರೆ ಎರಡನೇ ಹಂತದಲ್ಲಿರುವ ಶಾಲೆಗಳು ಕಳೆದ ವರ್ಷದ ಶುಲ್ಕವನ್ನೇ ಪಡೆಯುತ್ತಿವೆ. ಅಲ್ಲದೇ ಕಂತಿನ ಸೌಲಭ್ಯಗಳನ್ನೂ ನೀಡಿವೆ.

ಈಗಾಗಲೇ ಸಂಕಷ್ಟದಲ್ಲಿನ ಕೆಲ ಖಾಸಗಿ ಶಾಲೆಗಳಲ್ಲಿ ಪೋಷಕರು ಶೇ.50ರಷ್ಟು ಶುಲ್ಕವನ್ನು ಕಟ್ಟಿದರೂ ಸಾಕು ಎನ್ನುವಂತಹ ಸಂಕಷ್ಟದ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘದ ಅಧ್ಯಕ್ಷ ತ್ಯಾವಣಗಿ ವೀರಭದ್ರಸ್ವಾಮಿ.

ಲಸಿಕೆ ವಂಚಿತ ಶಿಕ್ಷಕರು: ನಗರ ಪ್ರದೇಶದಲ್ಲಿ ಕೆಲವೇ ಶಿಕ್ಷಕರನ್ನು ಹೊರತುಪಡಿಸಿದರೆ ಬಹುತೇಕ ಶಿಕ್ಷಕರಿಗೆ ಕೋವಿಡ್ ಲಸಿಕೆ ದೊರೆತಿಲ್ಲ. ಸರ್ಕಾರ ಕೂಡಲೇ ಶಿಕ್ಷಕರಿಗೆ ಲಸಿಕೆ ನೀಡಬೇಕು ಎಂದು ಮಂಜುನಾಥ ಅಗಡಿ ಹಾಗೂ ತ್ಯಾವಣಗಿ ವೀರಭದ್ರಸ್ವಾಮಿ ಒತ್ತಾಯಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರಿಗೆ ಲಸಿಕೆ ಪಡೆಯಲು ತೆರಳಿದರೆ ನಮಗೆ ಇಲ್ಲಿಯವರೆಗೆ ಯಾವುದೇ ಆದೇಶ ಬಂದಿಲ್ಲ ಎಂದು ಹೇಳಿ ಕಳುಹಿಸುತ್ತಿದ್ದಾರೆ. ಇದೀಗ ಶಾಲಾ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ಶಿಕ್ಷಕರಿಗೆ ಲಸಿಕೆ ಅತ್ಯಗತ್ಯ ಎಂದವರು ಹೇಳಿದ್ದಾರೆ.

**ಸರ್ಕಾರದಿಂದ ಕಳೆದ ವರ್ಷ ಶೇ.70ರಷ್ಟು ಶುಲ್ಕವನ್ನು ಪಡೆಯಬೇಕೆಂಬ ಆದೇಶ ಬಂದಿತ್ತು. ಆದರೆ ಪ್ರಸಕ್ತ ವರ್ಷಕ್ಕೆ ಶೇ.100ರಷ್ಟು ಶುಲ್ಕ ಪಡೆಯಬಹುದೆಂಬ ಆದೇಶ ಬಂದಿಲ್ಲವಾದ್ದರಿಂದ ಗೊಂದಲವಿದೆ. ನೂತನ ಆದೇಶಕ್ಕೆ ಕಾಯುತ್ತಿದ್ದೇವೆ. ಶಿಕ್ಷಕರಿಗೆ ಲಸಿಕೆ ನೀಡುತ್ತಿದ್ದೇವೆ. ಆದರೆ ಶೇ.100ರಷ್ಟು ಪ್ರಗತಿ ಸಾಧಿಸಲಾಗುತ್ತಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಜಿಲ್ಲಾ ಪಂಚಾಯ್ತಿ ಸಿಇಒ ಅವರ ಗಮನಕ್ಕೆ ತರಲಾಗಿದೆ. ಸರ್ಕಾರದಿಂದ ಆದೇಶ ಬಂದ ಕೂಡಲೇ ಎಲ್ಲಾ ಶಿಕ್ಷಕರಿಗೂ ಲಸಿಕೆ ನೀಡಲು ಕ್ರಮ ವಹಿಸುತ್ತೇವೆ.**

**- ಸಿ.ಆರ್. ಪರಮೇಶ್ವರಪ್ಪ, ಡಿಡಿಪಿಐ.**

**ಕಾರ್ಪೋರೇಟ್ ಶಾಲೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿರುವ ಸಾವಿರಾರು ಬಜೆಟ್ ಶಾಲೆಗಳು ತೀವ್ರ ಸಂಕಷ್ಟದಲ್ಲಿವೆ. ಸರ್ಕಾರ ನಿಗದಿತ ಶುಲ್ಕವನ್ನಾದರೂ ಪೂರ್ಣವಾಗಿ ಕಟ್ಟುವಂತೆ ಪೋಷಕರಿಗೆ ಸೂಚಿಸಲಿ.**

**- ಮಂಜುನಾಥ ಅಗಡಿ, ರೂಪ್ಸಾ ರಾಜ್ಯ ಉಪಾಧ್ಯಕ್ಷ**

**ಜಿಲ್ಲೆಯಲ್ಲಿ 567 ಶಾಶ್ವತ ಅನುದಾನ ರಹಿತ ಶಾಲೆಗಳಿವೆ.ಸಾಕಷ್ಟು ಶಾಲೆಗಳು ಸಂಕಷ್ಟದ ಪರಿಸ್ಥಿತಿಯಲ್ಲಿವೆ.**

**- ತ್ಯಾವಣಗಿ ವೀರಭದ್ರಸ್ವಾಮಿ, ಅಧ್ಯಕ್ಷರು, ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘ.**

# ಹರಪನಹಳ್ಳಿ : ತೈಲ ಬೆಲೆ ಏರಿಕೆ ವಿರುದ್ಧ ಮುಂದುವರೆದ ಪ್ರತಿಭಟನೆ



ಹರಪನಹಳ್ಳಿ, ಜೂ.14- ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ ಏರಿಕೆ ವಿರುದ್ಧ ಹರಪನಹಳ್ಳಿ ಪಟ್ಟಣ ಸೇರಿದಂತೆ, ತಾಲ್ಲೂಕಿನ ಮತ್ತಿಹಳ್ಳಿ. ಬೆಣ್ಣಿಹಳ್ಳಿ, ನೀಲಗುಂದ ತೆಲಗಿ, ದುಗ್ಗಾವತಿ, ಕೂಲಹಳ್ಳಿ, ಬಾಗಳಿ, ಕೆ.ಕಲ್ಲಹಳ್ಳಿ ನಿಚ್ಚವನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜಿಲ್ಲಾ ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ. ವೀಣಾ ಮಹಾಂತೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸರ್ಕಾರ ಈ ಕೂಡಲೇ ಪೆಟ್ರೋಲ್, ಡೀಸೆಲ್ ಹಾಗೂ ದಿನಬಳಕೆ ವಸ್ತುಗಳ ಬೆಲೆಯನ್ನು ಕೈಗೆಟಕುವ ದರದಲ್ಲಿ ನಿಗದಿ ಮಾಡಬೇಕು ಎಂದು ವೀಣಾ ಒತ್ತಾಯಿಸಿದರು. ಯಡಿಯೂರಪ್ಪನವರ ಮುಖ್ಯಮಂತ್ರಿ ಕುರ್ಚಿ ಉಳಿಸಲು ಸ್ವಾಮೀಜಿಗಳ ದಂಡೇ ನಿಂತಿದ್ದು, ಈ ಬೆಳವಣಿಗೆ ರಾಜಕೀಯ ಹಾಗೂ ಧಾರ್ಮಿಕ ಎರಡೂ ಕ್ಷೇತ್ರಗಳಿಗೂ ಒಳ್ಳೆಯದಲ್ಲ ಎಂದರು.

ಈ ಸಂದರ್ಭದಲ್ಲಿ ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ಹರಿಯಮ್ಮನಹಳ್ಳಿ, ಯುವ ಕಾಂಗ್ರೆಸ್ ಉಪಾಧ್ಯಕ್ಷ ದಾದಾಪೀರ್ ಮಕರಬ್ಬಿ, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ನ್ಯಾಯವಾದಿ ಸಿದ್ಧಲಿಂಗನಗೌಡ, ಮುಖಂಡರಾದ ಮಂಜುನಾಥ ದುಗ್ಗಾವತಿ, ದಾದಾ ಖಲಂದರ್, ಗಾಯತ್ರಮ್ಮ ರೂಪ, ಲಕ್ಷ್ಮಿ, ರೇಖಾ, ಉಮಾ, ಸೀತಾ, ಕಾಳಮ್ಮ, ತಿಮ್ಮಲಾಪುರದ ನಾಗರಾಜ, ಸಚಿನ್ ಕುಮಾರ್, ಮದ್ದಾನ ಸ್ವಾಮಿ, ಇಸ್ಮಾಯಿಲ್, ಮಂಜುನಾಥ. ಮಹೇಶ, ಸಾಗರ್ ಪಟೇಲ್ ಇನ್ನಿತರರಿದ್ದರು.

# ಸಿದ್ದಲಿಂಗಯ್ಯ ನಿಧನಕ್ಕೆ ಶಾಸಕ ರಾಮಚಂದ್ರ ಶೋಕ



ಜಗಳೂರು, ಜೂ.14- ನೇರವಾದ ಮಾತುಗಾರರು, ಸಾಹಿತ್ಯದ ಮೂಲಕ ಶೋಷಿತರು, ನೊಂದವರಿಗೆ ಗೌರವ ತಂದು ಕೊಟ್ಟ ಕವಿ ಡಾ. ಸಿದ್ದಲಿಂಗಯ್ಯ ಅವರನ್ನು ಕಳೆದುಕೊಂಡಿರುವುದು ತೀವ್ರ ದುಃಖ ತಂದಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಕವಿ ಸಿದ್ದಲಿಂಗಯ್ಯ ಅಭಿಮಾನಿ ಬಳಗ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ, ಸಿದ್ಧಲಿಂಗಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಸಮಾಜದ ಎಲ್ಲಾ ವರ್ಗದ ಶೋಷಿತರ ಪರ ಧ್ವನಿ ಎತ್ತುವ ಮೂಲಕ ಅಕ್ಷರ ರೂಪದಲ್ಲಿ ಜಾಗೃತಿಗೊಳಿಸುತ್ತಿದ್ದರು. ಸ್ವಾಸ್ಥ್ಯ ಸಮಾಜ ಕಟ್ಟುವಲ್ಲಿ ಅವರ ಸೇವೆ ಅಪಾರವಾಗಿದೆ ಎಂದು ಹೇಳಿರುವ ಶಾಸಕರು, ಸಿದ್ದಲಿಂಗಯ್ಯ ಅವರೊಂದಿಗೆ ತಾವು ಒಂದೆರಡು ಸಾರಿ ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ದಲಿತ ಮುಖಂಡ ಜಿ.ಹೆಚ್. ಶಂಭುಲಿಂಗಪ್ಪ, ಡಿಸಿಸಿ ಬ್ಯಾಂಕ್ ಜಿಲ್ಲಾಧ್ಯಕ್ಷ ವೇಣುಗೋಪಾಲ್ ರೆಡ್ಡಿ, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಭಾರತ್ ಗ್ಯಾಸ್ ಓಬಣ್ಣ, ಪೂಜಾರಿ ಸಿದ್ದಪ್ಪ, ಎಂ. ರಾಜಪ್ಪ, ಸತೀಶ್, ಪ.ಪಂ. ಸದಸ್ಯರಾದ ನವೀನ್‌ಕುಮಾರ್, ಮುಖಂಡರಾದ ಶಿವಕುಮಾರಸ್ವಾಮಿ, ಶಿವಣ್ಣ, ಓಬಳೇಶ್ ಇನ್ನಿತರರಿದ್ದರು.

# ಕೂಡ್ಲಿಗಿ : ವ್ಯಕ್ತಿಗೆ ಚಿರತೆ ದಾಳಿ

ಕೂಡ್ಲಿಗಿ, ಜೂ.14- ತಾಲ್ಲೂಕಿನ ಜಮ್ಮೋಬನಹಳ್ಳಿ ಗ್ರಾಮದ ಸುದರ್ಶನ್ ಇಂದು ಬೆಳಿಗ್ಗೆ ದನ ಮೇಯಿಸಲು ಹೋದ ಸಂದರ್ಭದಲ್ಲಿ ಏಕಾಏಕಿ ಚಿರತೆ ದಾಳಿ ಮಾಡಿದೆ.



ಆತನ ಆಕ್ರಂದನ ಕೇಳಿಸಿಕೊಂಡು ಬಿತ್ತನೆಯಲ್ಲಿ ತೊಡಗಿದ್ದ ರೈತರು ಆತನನ್ನು ಕಾಪಾಡಿದ್ದಾರೆ. ಸುದರ್ಶನ್ ಕತ್ತಿನ ಭಾಗಕ್ಕೆ ತೀವ್ರ ಗಾಯಗಳಾಗಿದ್ದು, ಖಾನಾ ಹೊಸಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮುಂಗಾರು ಬಿತ್ತನೆ ಇರುವುದರಿಂದ ರೈತರು ಹೊಲದಲ್ಲಿ ಕೆಲಸ ಮಾಡಬೇಕಿದ್ದು, ಚಿರತೆ ದಾಳಿಯ ಘಟನೆ ನಂತರ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಚಿರತೆಯನ್ನು ಹಿಡಿಯಬೇಕು ಎಂದು ಒತ್ತಾಯ ಮಾಡಿದ್ದಾರೆ.

# ಹೊನ್ನಾಳಿಯ 5, ನ್ಯಾಮತಿಯ 3 ಹಳ್ಳಿಗಳು ಸೀಲ್‌ಡೌನ್

ಹೊನ್ನಾಳಿ, ಜೂ.14- ತಾಲ್ಲೂಕಿನಲ್ಲಿ 10ಕ್ಕಿಂತ ಹೆಚ್ಚು ಕೊರೊನಾ ಪಾಸಿಟಿವ್ ಕಂಡುಬಂದ ಹಳ್ಳಿಗಳನ್ನು ಸೀಲ್‌ಡೌನ್ ಮಾಡುತ್ತಿದ್ದು, ತಾಲ್ಲೂಕಿನ ಕುಳಗಟ್ಟೆ ಗ್ರಾಮ ಇಂದು ಸೀಲ್‌ಡೌನ್ ಆಗಿದೆ.



ತಾಲ್ಲೂಕಿನ ಕೂಲಂಬಿ, ಗೊಲ್ಲರಹಳ್ಳಿ, ಕುಳಗಟ್ಟೆ, ಐನೂರು, ಹನುಮನಹಳ್ಳಿ ಗ್ರಾಮಗಳು ಸೀಲ್‌ಡೌನ್ ಆಗಿದೆ. ಸಾಸ್ವೆಹಳ್ಳಿಯಲ್ಲಿ 7ಕ್ಕೂ ಹೆಚ್ಚು ಪಾಸಿಟಿವ್ ಕಂಡುಬಂದ ಹಿನ್ನೆಲೆಯಲ್ಲಿ ವ್ಯಾಪಾರ, ವಹಿವಾಟಿಗೆ ಅವಕಾಶ ನೀಡಿಲ್ಲ ಎಂದು ತಹಶೀಲ್ದಾರ್ ಬಸವನಗೌಡ ಕೋಟೂರ್ ತಿಳಿಸಿದರು.

ನ್ಯಾಮತಿ ತಾಲ್ಲೂಕಿನ ಪಲವನಹಳ್ಳಿ, ಕುಂಕೋವ, ಸುರಹೊನ್ನೆ ಗ್ರಾಮಗಳು ಇದೇ ರೀತಿ ಸೀಲ್‌ಡೌನ್ ಆಗಿದ್ದು, ಸೀಲ್‌ಡೌನ್ ನೀತಿ ನಿಯಮವನ್ನು ಅಲ್ಲಿ ಅಳವಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೊರೊನಾ ಎರಡನೇ ಅಲೆ ಇನ್ನು ಇರುವ ಕಾರಣ ಮದುವೆ, ಧಾರ್ಮಿಕ ಕಾರ್ಯಕ್ರಮ ಮತ್ತಿತರೆ ಸಮಾರಂಭಗಳಿಗೆ ಕಡ್ಡಾಯವಾಗಿ ನೀತಿ ನಿಯಮ ಮುಂದುವರೆದಿರುತ್ತದೆ ಎಂದರು.

ಹೆಚ್ಚು ಕೊರೊನಾ ಟೆಸ್ಟ್ ನಡೆಸುತ್ತಿದ್ದು, ಪಾಸಿಟಿವ್ ಪ್ರಕರಣಗಳ ಸಂಖ್ಯೆ ತಾಲ್ಲೂಕಿನಲ್ಲಿ ಕಡಿಮೆ ಕಂಡುಬರುತ್ತಿವೆ. ಜೂನ್ 14ರಂದು ನೂರು ಜನರಿಗೆ ನಡೆಸಿದ ತಪಾಸಣೆಯಲ್ಲಿ ಕೇವಲ 6 ಜನರಲ್ಲಿ ಮಾತ್ರ ಪಾಸಿಟಿವ್ ಕಂಡುಬಂದಿದೆ ಎಂದರು.

ತಾಲ್ಲೂಕು ಪಂಚಾಯ್ತಿ ಉಪಾಧ್ಯಕ್ಷ ಕುಳಗಟ್ಟೆ ರಂಗನಾಥ್ ಮಾತನಾಡಿ, ಕುಳಗಟ್ಟೆ ಗ್ರಾಮದ ಎರಡು ರಸ್ತೆಗಳನ್ನು ಬಿಟ್ಟು ಉಳಿದೆಲ್ಲಾ ಕಡೆ ಸೀಲ್‌ಡೌನ್ ಮಾಡಲಾಗಿದೆ ಎಂದು ಜನತಾವಾಣಿಗೆ ತಿಳಿಸಿದ್ದಾರೆ. ಆ ಸಂದರ್ಭದಲ್ಲಿ ಪಿಡಿಓ ಭಾರತಿ, ಪಂಚಾಯಿತಿ ಸದಸ್ಯ ಹಾಲೇಶ್, ಬಸಯ್ಯ, ರಂಗನಾಥ್ ಮತ್ತಿತರರು ಇದ್ದರು.


**ಟಿ.ಎಸ್.ಪುಂಡಲೀಕ ರಾವ್ ನಿಧನ**



ದಾವಣಗೆರೆ ಲೇಬರ್ ಕಾಲೋನಿ 4ನೇ ಕ್ರಾಸ್, ನಾಟ್ಯ ಗಣಪತಿ ದೇವಸ್ಥಾನದ ಹತ್ತಿರದ ವಾಸಿ
**ಶ್ರೀ ಟಿ.ಎಸ್. ಪುಂಡಲೀಕ ರಾವ್**
ಅವರು ದಿನಾಂಕ: 14-6-2021 ರ ಸೋಮವಾರ ರಾತ್ರಿ 8-40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿನಾಂಕ : 15-6-2021ರ ಮಂಗಳವಾರ ಮಧ್ಯಾಹ್ನ 12-00 ಗಂಟೆಗೆ ನಗರದ ಲೇಬರ್ ಕಾಲೋನಿಯಲ್ಲಿರುವ ಆರ್.ಹೆಚ್.ಬೃಂದಾವನದಲ್ಲಿ ನೆರವೇರಲಿದೆ.
ದು:ಖತಪ್ತ ಕುಟುಂಬ ವರ್ಗ: **ಪತ್ನಿ ಶ್ರೀಮತಿ ವಿನೋದಾಬಾಯಿ, ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು - ಮಿತ್ರರು. ಮೊ :9916495807**



**ವೈಕುಂಠ ಸಮಾರಾಧನೆ**
ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ ವಾಸಿ
**ಶ್ರೀಮತಿ ಕೆ. ಇಂದುಮತಿ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 05.06.2021 ನೇ ಶನಿವಾರ ಬೆಳಿಗ್ಗೆ 6 ಗಂಟೆಗೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಡಿ.ಎನ್. ನಾಗರಾಜ**
**(ನಿವೃತ್ತ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು)**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ವೈಕುಂಠ ಸಮಾರಾಧನೆ'ಯನ್ನು**
**ದಿನಾಂಕ 16.06.2021 ನೇ ಬುಧವಾರ ಬೆಳಿಗ್ಗೆ 11.30 ಗಂಟೆಗೆ ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು** ಗುರು ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
**ಶ್ರೀಮತಿ ಕೆ. ಇಂದುಮತಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು. ಮೊ. : 86184 36744**


## 'ನೀವು ಇದ್ದಲ್ಲಿಂದಲೇ ನನ್ನನ್ನು ಹಾರೈಸಿ'

**(1ನೇ ಪುಟದಿಂದ)** ದೇವರ ಆಶೀರ್ವಾದದಿಂದ ತಾವು ಆರೋಗ್ಯವಾಗಿದ್ದು, ಎಲ್ಲರ ಜೊತೆ ಇದ್ದು ಜನಸೇವೆ ಮಾಡುವ ಭಾಗ್ಯ ತಮಗೆ ಲಭಿಸಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

'ನನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ಎಲ್ಲರ ಹಾರೈಕೆ ಮತ್ತು ಶುಭಾಶಯಗಳು ಸದಾ ನನ್ನ ಜೊತೆ ಇದ್ದೇ ಇರುತ್ತವೆ ಎಂದು ನಂಬಿದ್ದೇನೆ. ಕೊರೊನಾದ ಈ ಸಂದರ್ಭದಲ್ಲಿ ಜನ್ಮದಿನದ ಶುಭಾಶಯ ತಿಳಿಸಲೆಂದು ಗುಂಪು - ಗುಂಪಾಗಿ ಬರದೇ ನೀವು ಇದ್ದ ಸ್ಥಳದಿಂದಲೇ ನನಗೆ ಶುಭ ಹಾರೈಸಬೇಕೆಂದು ವಿನಂತಿಸುತ್ತೇನೆ' ಎಂದು ಎಸ್ಸೆಸ್ ಕೇಳಿಕೊಂಡಿದ್ದಾರೆ.

'ಪರಸ್ಪರ ಅಂತರ ಕಾಪಾಡುವುದು ನಮ್ಮ - ನಿಮ್ಮೆಲ್ಲರ ಜವಾಬ್ಧಾರಿಯಾಗಿದ್ದು, ಇದನ್ನು ಎಲ್ಲರೂ ಪಾಲಿಸೋಣ. ಹಾರ - ತುರಾಯಿಗಳಿಗಿಂತ ನಿಮ್ಮ ಹೃದಯಾಳದ ಹಾರೈಕೆ ಅಮೂಲ್ಯ. ದೇವರು ನಿಮ್ಮೆಲ್ಲರ ಸೇವೆ ಮಾಡಲು ಕಲ್ಪಿಸಿರುವ ಈ ಅವಕಾಶಕ್ಕೆ ನಾನು ಸದಾ ಋಣಿಯಾಗಿರುತ್ತೇನೆ' ಎಂದು ಅವರು ತಿಳಿಸಿದ್ದಾರೆ.

## 19 ಜಿಲ್ಲೆಗೆ ಬಿತ್ತನೆ ಬೀಜಗಳ ಕಿಟ್

**(1ನೇ ಪುಟದಿಂದ)** ಶೇ.15.23 ಬಿತ್ತನೆಯಾಗಿದೆ. ಈ ಬಾರಿ 6 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಕ್ಕೆ ಬೇಡಿಕೆಯಿದ್ದು, 7.74 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಲಭ್ಯತೆಯಿದ್ದು, ಇಲ್ಲಿಯವರೆಗೆ 1.79 ಲಕ್ಷ ಕ್ವಿಂಟಾಲ್ ವಿತರಣೆಯಾಗಿದ್ದು, ರೈತ ಸಂಪರ್ಕ ಕೇಂದ್ರಗಳಲ್ಲಿ 1.15 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ ಎಂದವರು ಹೇಳಿದ್ದಾರೆ.

## ಅಂತಿಮವಾಗಿಲ್ಲ

**(1ನೇ ಪುಟದಿಂದ)** ರಚಿಸಲಾಗಿತ್ತು. ಸೋಮವಾರ ಸಮಿತಿ ವರದಿ ಸಲ್ಲಿಸಬೇಕಿತ್ತು. ಆದರೆ, ಮಾನದಂಡಗಳನ್ನು ಅಂತಿಮಗೊಳಿಸಲು ಇನ್ನೂ ಕೆಲ ದಿನ ಸಮಯ ಬೇಕು ಎಂದು ಸಮಿತಿ ತಿಳಿಸಿದೆ.

ನ್ಯಾಯೋಚಿತ ಹಾಗೂ ವಸ್ತುನಿಷ್ಠವಾದ ಮಾನದಂಡ ರೂಪಿಸಲು ವ್ಯಾಪಕ ಚರ್ಚೆ ನಡೆಸಬೇಕಿದೆ. ಶೀಘ್ರದಲ್ಲೇ ಅಂತಿಮ ಶಿಫಾರಸ್ಸು ಸಲ್ಲಿಸಲಾಗುವುದು ಎಂದು ಮೂಲಗಳು ಹೇಳಿವೆ.

ಸಮಿತಿಯ ಬಹುತೇಕ ಸದಸ್ಯರು ಹತ್ತು ಹಾಗೂ 11ನೇ ತರಗತಿಯ ಅಂಕಗಳು ಮತ್ತು 12ನೇ ತರಗತಿಯ ಆಂತರಿಕ ಮೌಲ್ಯಮಾನಗಳಿಗೆ ಮಾನ್ಯತೆ ನೀಡುವುದರ ಪರವಾಗಿದ್ದಾರೆ.

ಈ ಬಗ್ಗೆ ಶೀಘ್ರದಲ್ಲೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

## ಕೊರೊನಾ ಸಾವಿಗೆ ಲಕ್ಷ ಪರಿಹಾರ

**(1ನೇ ಪುಟದಿಂದ)** ರಾಜ್ಯ ಇಂತಹ ನಿರ್ಧಾರ ಕೈಗೊಂಡಿಲ್ಲ. ನಾವೇ ಮೊದಲಿಗೆ, ನೊಂದಿರುವ ಬಡ ಕುಟುಂಬಗಳ ಕೈ ಹಿಡಿಯುತ್ತಿದ್ದೇವೆ ಎಂದರು.


ಇದೇ ಸಂದರ್ಭದಲ್ಲಿ ಮಂಡ್ಯ ಹಾಲು ಒಕ್ಕೂಟದಲ್ಲಿ ಹಾಲಿಗೆ ನೀರು ಬೆರಕೆ ಮಾಡಿ, ಎಸಗಿರುವ ಪ್ರಕರಣವನ್ನು ಸಿಐಡಿಗೆ ವಹಿಸುವುದಾಗಿ ಮುಖ್ಯಮಂತ್ರಿಯವರು ಇದೇ ಸಂದರ್ಭದಲ್ಲಿ ಘೋಷಿಸಿದರು.

ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ವರದಿ ಬಂದಿದ್ದು, ಐವರು ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ. ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರನ್ನು ವರ್ಗಾವಣೆ ಮಾಡಿ, ಬೇರೆಯವರನ್ನು ನೇಮಿಸಲಾಗಿದೆ. ಅಲ್ಲದೆ, ಹಾಲು ಒಕ್ಕೂಟದ ಮೇಲೆ 60 ರ ನಿಯಮದಡಿ ತನಿಖೆಯೂ ನಡೆಯುತ್ತಿದೆ ಎಂದು ತಿಳಿಸಿದರು.

## ಲಾಕ್‌ಡೌನ್ ನಂತರವೇ ಶಿಕ್ಷಕರು

**(1ನೇ ಪುಟದಿಂದ)** ಶಾಲೆಗಳಿಗೆ ಭೌತಿಕವಾಗಿ ಹಾಜರಾಗಲು ಅವಕಾಶ ನೀಡಲಾಗಿದೆ.ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ ಸುತ್ತೋಲೆ ಹೊರಡಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದೂ ಅವರು ಹೇಳಿದ್ದಾರೆ.



ಲಾಕ್‌ಡೌನ್ ಬಿಡುವಿನ ಖರೀದಿ

ದಾವಣಗೆರೆ, ಜು.14- ಮುಂದುವರಿದ ಸಂಪೂರ್ಣ ಲಾಕ್‌ಡೌನ್ ನಡುವೆ ಸೋಮವಾರ ಬೆಳಿಗ್ಗೆ 6 ರಿಂದ 12ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿತ್ತು. ಜಿಟಿ ಜಿಟಿ ಮಳೆಯ ನಡುವೆಯೇ ಜನತೆ ನಿರಾತಂಕವಾಗಿ ಕೊಡು-ಕೊಳ್ಳುವಿಕೆಯಲ್ಲಿ ಮಗ್ನರಾಗಿದ್ದರು. ವಾಹನಗಳ ಸಂಚಾರ ಮಧ್ಯಾಹ್ನ 12 ಗಂಟೆವರೆಗೆ ಹೆಚ್ಚಾಗಿಯೇ ಇತ್ತು. ನಗರ ಪ್ರದೇಶದಲ್ಲೂ ಸಹ ದಿನಸಿ ಅಂಗಡಿಗಳು ತೆರೆಯಲ್ಪಟ್ಟಿದ್ದವು. ಗ್ರಾಹಕರು ಸಮಾಧಾನದಿಂದಲೇ ಖರೀದಿಯಲ್ಲಿ ನಿರತರಾಗಿದ್ದರು. ಬಹುತೇಕ ಕಡೆ ಸಲೂನ್‌ಗಳು ತೆರೆಯಲ್ಪಟ್ಟಿದ್ದವು. ಬುಧವಾರ ಹಾಗೂ ಶುಕ್ರವಾರ ಮತ್ತೆ ಖರೀದಿಗೆ ಜಿಲ್ಲಾಡಳಿತ ಅವಕಾಶ ಕಲ್ಪಿಸಿದೆ.

# ಯೋಗವೆಂಬುದು ಕೇವಲ ವ್ಯಾಯಾಮವಲ್ಲ, ಜೀವನ ಶೈಲಿ

## ಪ್ರಕೃತಿ ಚಿಕಿತ್ಸಾ ತಜ್ಞ ವೈದ್ಯ ಡಾ. ಗಂಗಾಧರ ವರ್ಮ ವಿಶ್ಲೇಷಣೆ

ದಾವಣಗೆರೆ, ಜೂ.14- ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ವತಿಯಿಂದ 7ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ 7 ದಿನಗಳ ಉಚಿತ ಆನ್‌ಲೈನ್ ಯೋಗ ತರಬೇತಿ ಶಿಬಿರವನ್ನು ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರಗೌಡ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಯೋಗವೆನ್ನುವುದು ನಮ್ಮ ಪುರಾತನ ಚಿಕಿತ್ಸಾ ಪದ್ಧತಿ ಮತ್ತು ಪುರಾತನ ತತ್ವಶಾಸ್ತ್ರ. ಇದು ಒಂದು ಜೀವನ ಶೈಲಿ ಹಾಗೂ ಕಲೆ. ಒಬ್ಬ ಮನುಷ್ಯನ ಸರ್ವೋನ್ನತ ಏಳಿಗೆಗೆ ಇದು ತುಂಬಾ ಸಹಕಾರಿ. ಯೋಗವು ಇಂದು ವಿಶ್ವಮಾನ್ಯವಾಗಿ ಜಾತಿ, ಮತ, ಧರ್ಮಗಳನ್ನು ಮೀರಿ ಬೆಳೆಯುತ್ತಿದೆ. ಎಲ್ಲಾ ಪಂಥದ ಜನರೂ ಒಂದಲ್ಲಾ ಒಂದು ಕಾರಣಕ್ಕಾಗಿ ಯೋಗದ ಮೊರೆ ಹೋಗುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ನಿರ್ವಾಹಕ ಮತ್ತು ಪ್ರಕೃತಿ ಚಿಕಿತ್ಸಾ ತಜ್ಞ ವೈದ್ಯ ಡಾ. ಗಂಗಾಧರ ವರ್ಮ ಮಾತನಾಡಿ, ಯೋಗವು ಭಾರತದ 4,000 ವರ್ಷಗಳಷ್ಟು ಹಿಂದಿನ ಪುರಾತನ ತತ್ವ. ಯೋಗದ ಪ್ರಕಾರ ದೇಹವು ಪಂಚಕೋಶಗಳಿಂದ ಮಾಡಲ್ಪಟ್ಟಿದೆ. ಅವುಗಳೆಂದರೆ ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಆನಂದಮಯ ಕೋಶ ಎಂದು ಹೇಳಿದರು.

ಯೋಗದ ಪ್ರಕಾರ ಎಲ್ಲಾ ರೀತಿಯ ತೊಂದರೆಗಳು ಮಾನವನಿಗೆ ವಿಜ್ಞಾನಮಯ ಕೋಶದಲ್ಲಿ ಉದ್ಭವಿಸುತ್ತವೆ. ಆದರೆ ಇವುಗಳು ಕಾಣಿಸಿಕೊಳ್ಳುವುದು ಮನೋಮಯ ಕೋಶದಲ್ಲಿ. ಮಾನಸಿಕ ಉದ್ವೇಗ ಅಥವಾ ಮಾನಸಿಕ ಒತ್ತಡವು ಮನಸ್ಸಿನ ಸಮತೋಲನವನ್ನು ಏರುಪೇರು ಮಾಡುತ್ತದೆ. ಮಾನಸಿಕ ಉದ್ವೇಗವು ತೀವ್ರವಾದ ಬೇಕು-ಬೇಡಗಳು, ರಾಗ-ದ್ವೇಷಗಳು, ಇಚ್ಛೆ-ನಿಚ್ಛೆಗಳಿಂದ ಕಾಣಿಸಿಕೊಳ್ಳುತ್ತವೆ. ಈ ಮನೋಮಯ ಕೋಶದ ಅಸಮತೋಲನವು ಪ್ರಾಣಮಯ ಕೋಶದ ಮೇಲೆ ಪ್ರಭಾವ ಬೀರಿ ಅಲ್ಲಿನ ಪ್ರಾಣದ ಹರಿಯುವಿಕೆಯಲ್ಲಿ ಅಡ್ಡಿ, ಅಡಚಣೆಯನ್ನುಂಟು ಮಾಡುತ್ತದೆ. ಈ ಅಡಚಣೆಯು ಅನ್ನಮಯ ಕೋಶದಲ್ಲಿ ವ್ಯಾಧಿಯಾಗಿ ಕಾಣಿಸಿಕೊಳ್ಳುತ್ತದೆ. ವಿಜ್ಞಾನಮಯ ಕೋಶದಲ್ಲಿ ಉದ್ಭವಗೊಂಡು ಮನೋಮಯ ಕೋಶದಲ್ಲಿ ಅಭಿವೃದ್ಧಿಗೊಳ್ಳುವ ಇದನ್ನು ಯೋಗದ ಪರಿಭಾಷೆಯಲ್ಲಿ 'ಆಧಿ' ಎಂದು ಕರೆ ಯುತ್ತಾರೆ. ಈ ಆಧಿಯನ್ನು ದೂರ ಮಾಡಲು ನಾವು ಯೋಗಾಭ್ಯಾಸವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.




ಯೋಗವೆಂಬುದು ಕೇವಲ ವ್ಯಾಯಾಮವಲ್ಲ, ಇದು ಒಂದು ಜೀವನ ಶೈಲಿ. ಪತಂಜಲಿ ಮುನಿಯು ಯೋಗವನ್ನು ಅಷ್ಟಾಂಗ ಯೋಗದ ಮೂಲಕ ವಿಭಾಗಿಸಿದ್ದಾರೆ. ಅವುಗಳೆಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿಗಳು. ಪತಂಜಲಿಯ ಅಷ್ಟಾಂಗ ಯೋಗದ ಎಂಟು ಮೆಟ್ಟಿಲುಗಳನ್ನು ಹತ್ತುವ ಸಲುವಾಗಿ ಸಾಧಕನು ಅಭ್ಯಾಸ-ವೈರಾಗ್ಯಗಳನ್ನು ರೂಢಿಸಿಕೊಂಡು ಚಿತ್ತವನ್ನು ಏಕಾಗ್ರಗೊಳಿಸಲು, ಎಲ್ಲ ದಿಕ್ಕುಗಳಲ್ಲಿಯೂ ಹರಿದುಹಂಚಿ ಹೋಗುವ ಮನಃ ಶಕ್ತಿಯನ್ನು ಸಂಚಯಿಸಲು ಯತ್ನಿಸಬೇಕು ಎಂದು ತಿಳಿಸಿದರು.

ಪ್ರಹ್ಲಾದ್ ಹಾಗೂ ನಗರದ 95 ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಭ್ಯಾಸ ಮಾಡಿದರು. ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಡಿ.ಎಂ. ರತ್ನ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ 200 ಪಾಸಿಟಿವ್, 10 ಸಾವು, 315 ಗುಣಮುಖ

ದಾವಣಗೆರೆ, ಜೂ.14- ಜಿಲ್ಲೆಯಲ್ಲಿ 200 ಕೊರೊನಾ ಪಾಸಿಟಿವ್ ಪ್ರಕರಣಗಳು ಸೋಮವಾರ ವರದಿಯಾಗಿವೆ. 10 ಜನರು ಸೋಂಕಿನಿಂದ ಮೃತಪಟ್ಟಿದ್ದು, 315 ಜನರು ಗುಣಮುಖರಾಗಿರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆಯಲ್ಲಿ 109, ಹರಿಹರ 17, ಜಗಳೂರು 14, ಚನ್ನಗಿರಿ 36, ಹೊನ್ನಾಳಿ 19 ಹಾಗೂ ಹೊರ ಜಿಲ್ಲೆಯ 5 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ಜಯನಗರ ಬಿ ಬ್ಲಾಕ್‌ನ 84 ವರ್ಷದ ವೃದ್ಧ, ಚೌಡೇಶ್ವರಿ ನಗರದ 45 ವರ್ಷದ ಮಹಿಳೆ, ನಿಟುವಳ್ಳಿಯ 52 ವರ್ಷದ ಮಹಿಳೆ. ಚನ್ನಗಿರಿ ಬಸವಾಪಟ್ಟಣ ಬಸ್ ನಿಲ್ದಾಣದ ಬಳಿಯ 42 ವರ್ಷದ ಪುರುಷ, ನಲ್ಲೂರಿನ 55 ವರ್ಷದ ಮಹಿಳೆ, ಸಿದ್ಧನಮಠದ 68 ವರ್ಷದ ಪುರುಷ, ಬಿದರಗಡ್ಡೆಯ 55 ವರ್ಷದ ಪುರುಷ, ದೊಡ್ಡಘಟ್ಟದ 46 ವರ್ಷದ ಮಹಿಳೆ. ಹರಿಹರ ತೆಗ್ಗಿನಕೇರಿ ಬಳಿಯ 59 ವರ್ಷದ ಪುರುಷ ಕೋವಿಡ್ ಸೋಂಕಿನಿಂದ ಮೃತಪಟ್ಟಿದ್ದಾರೆ. ಜಿಲ್ಲೆಯಲ್ಲಿ 4268 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 441 ಜನರು ಮೃತಪಟ್ಟಿದ್ದಾರೆ.

## ಸುತ್ತೂರು ಸ್ವಾಮೀಜಿಗಳ ಪೂರ್ವಾಶ್ರಮದ ತಾಯಿ ನಿಧನ

ಬೆಂಗಳೂರು, ಜೂ. 14 - ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಪೂರ್ವಾಶ್ರಮದ ತಾಯಿ ಶಿವನಾಗಮ್ಮ ಅವರ ನಿಧನಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಅಧ್ಯಾತ್ಮಿಕ ಸಾಧನೆಯಲ್ಲಿ ಶಿವವನಾಗಮ್ಮ ಅವರು ಗಾಢ ಪ್ರಭಾವ ಬೀರಿದ್ದರು. ಸಾಹಿತ್ಯ, ಸಂಸ್ಕೃತಿ, ಅಧ್ಯಾತ್ಮಿಕ ವಿಷಯಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದ ಅವರು ತಮ್ಮ ಮಕ್ಕಳು ಸನ್ಮಾರ್ಗದಲ್ಲಿ ನಡೆಯಲು ಪ್ರೇರೇಪಿಸಿದ್ದರು ಎಂದು ಮುಖ್ಯಮಂತ್ರಿಗಳು ತಮ್ಮ ಸಂತಾಪ ಸೂಚಕದಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ದರ ಏರಿಕೆಗೆ ಎಸ್‌ಯುಸಿಐ ಖಂಡನೆ




ದಾವಣಗೆರೆ, ಜೂ.14- ರಾಜ್ಯದಲ್ಲಿ ಏಪ್ರಿಲ್ 1ರಿಂದಲೇ ಜಾರಿಗೆ ಬರುವಂತೆ ವಿದ್ಯುತ್ ದರ ಏರಿಕೆ ಮಾಡಿರುವ ತೀರ್ಮಾನವನ್ನು ಖಂಡಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್) (ಎಸ್‌ಯುಸಿಐ) ಜಿಲ್ಲಾ ಸಮಿತಿಯಿಂದ ಪಕ್ಷದ ಕಛೇರಿ ಎದುರು ಪ್ರತಿಭಟನೆ ಮತ್ತು ಜಿಲ್ಲೆಯಾದ್ಯಂತ ಆನ್‌ಲೈನ್ ಪ್ರತಿಭಟನೆ ನಡೆಸಲಾಯಿತು.

ಪ್ರತಿ ಯೂನಿಟ್‌ಗೆ ಸರಾಸರಿ 30 ಪೈಸೆಯಂತೆ ಏರಿಕೆ ಮಾಡಲಾಗಿದೆ. ಜೊತೆಗೆ ನಿಗದಿತ ಠೇವಣಿ ಮೊತ್ತವನ್ನೂ ಏರಿಕೆ ಮಾಡಲಾಗಿದೆ. ಲಾಕ್‌ಡೌನ್ ಕಾರಣಕ್ಕೆ ತಮ್ಮ ಉದ್ಯೋಗ, ಆದಾಯ ಕಳೆದುಕೊಂಡಿರುವ ಜನರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಬೇರೆ ಕೆಲವು ರಾಜ್ಯಗಳಲ್ಲಿ ವಿದ್ಯುತ್, ನೀರಿನ ಶುಲ್ಕಗಳ ಪಾವತಿಯನ್ನು ರದ್ದುಗೊಳಿಸಿದ ಅಥವಾ ಮುಂದೂಡಿದ ನಿದರ್ಶನಗಳಿರುವಾಗ ರಾಜ್ಯದಲ್ಲಿ ದರ ಏರಿಕೆ ಮಾಡಿರುವುದನ್ನು ಖಂಡಿಸಲಾಯಿತು.

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್ ಕೈದಾಳೆ, ರಾಜ್ಯ ಸಮಿತಿ ಸದಸ್ಯ ಸುನೀತ್ ಕುಮಾರ್, ಜಿಲ್ಲಾ ಸಂಘಟನಾಕಾರ ಮಂಜುನಾಥ್ ಕುಕ್ಕುವಾಡ, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ಪರಶುರಾಮ್, ಕಾವ್ಯ, ಪುಷ್ಪ, ಭಾರತಿ, ಲೋಕೇಶ್ ನೀರ್ಥಡಿ, ಬೀರಲಿಂಗಣ್ಣ ನೀರ್ಥಡಿ, ಪ್ರಕಾಶ್, ರಾಘವೇಂದ್ರ ನಾಯಕ್, ಗುರು, ಸ್ಮಿತಾ, ನಾಗಜ್ಯೋತಿ ಇತರರು ಪ್ರತಿಭಟನೆಯಲ್ಲಿದ್ದರು.

## ಹರಿಹರ ನಗರ ಠಾಣೆಗೆ ನೂತನ ಎಸ್ಪಿ ರಿಷ್ಯಂತ್ ಭೇಟಿ



ಹರಿಹರ, ಜೂ.14- ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಅವರು ನಗರದ ಪೊಲೀಸ್ ಠಾಣೆಗೆ ನಿನ್ನೆ ಭೇಟಿ ನೀಡಿ, ಸ್ಥಳೀಯ ಕಾನೂನು ಸುವ್ಯವಸ್ಥೆ ಬಗ್ಗೆ ಸಿಪಿಐ ಸತೀಶ್‌ಕುಮಾರ್ ಹಾಗೂ ಪಿಎಸ್‌ಐಗಳಾದ ಸುನೀಲ್, ಬಸವರಾಜ್ ಅವರಿಂದ ಮಾಹಿತಿ ಪಡೆದರು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿದ ಬಳಿಕ ಅಕ್ರಮ ಚಟುವಟಿಕೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಸತೀಶ್‌ಕುಮಾರ್, ಪಿಎಸ್‌ಐ ಸುನೀಲ್, ಬಸವರಾಜ್, ಡಿ. ರವಿಕುಮಾರ್, ವೀರಬಸಪ್ಪ ಕುಸಲಾಪುರ, ಲತಾ ಇದ್ದರು.

# ಸೇಂಟ್ ಜಾನ್ಸ್ ಶಾಲೆಯಲ್ಲಿ ಉಚಿತ ಲಸಿಕಾ ಶಿಬಿರ



ದಾವಣಗೆರೆ, ಜೂ.14 - ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಸಾರ್ವಜನಿಕರಿಗೆ ಕೊಡುಗೆ ನೀಡಿರುವ ಕೊರೊನಾ ಉಚಿತ ಲಸಿಕಾ ಶಿಬಿರವು ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇಂದು ನಡೆಯಿತು.

ಆರ್.ಎಸ್. ರಾಕೇಶ್ ಮತ್ತು ಪ್ರವೀಣ್ ಹುಲ್ಲುಮನೆ ಅವರುಗಳ ನೇತೃತ್ವದಲ್ಲಿ ಈ ಶಿಬಿರ ಏರ್ಪಾಡಾಗಿತ್ತು. ಆರ್.ಹೆಚ್. ನಾಗಭೂಷಣ್, ಹೆಚ್.ಅನಿಲ್ ಕುಮಾರ್, ಟಿ.ಎಂ. ಉಮಾಪತಯ್ಯ, ಗಣೇಶ್ ಹುಲ್ಲುಮನೆ, ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು, ಶಾಲೆ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಶಿಬಿರದಲ್ಲಿ ಉಪಸ್ಥಿತರಿದ್ದರು.

## ನಟ ಸಂಚಾರಿ ವಿಜಯ್ ನಿಧನಕ್ಕೆ ಬಾವಿಕಟ್ಟೆ ಶೋಕ

ದಾವಣಗೆರೆ,ಜೂ.14- ಪ್ರತಿಭಾವಂತ ಚಿತ್ರ ನಟ ಸಂಚಾರಿ ವಿಜಯ್ ನಿಧನಕ್ಕೆ ಶಿಕ್ಷಕ ಮತ್ತು ಸಾಹಿತಿ ಮಲ್ಲಿಕಾರ್ಜುನ ಬಾವಿಕಟ್ಟೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ವಿಜಯ್ ಮತ್ತು ತಮ್ಮ ನಡುವೆ 10 ವರ್ಷಗಳ ಬಾಂಧವ್ಯ ಇತ್ತು ಎಂದಿರುವ ಮಲ್ಲಿಕಾರ್ಜುನ್, ಶಿಕ್ಷಕರೆಂದರೆ ವಿಜಯ್ ಅವರಿಗೆ ಎಲ್ಲಿಲ್ಲದ ಪ್ರೀತಿ. ನಾನೂ ಶಿಕ್ಷಕನಾಗಬೇಕಿತ್ತು, ಆದರೆ, ನಟನಾಗಿದ್ದೇನೆ ಎನ್ನುತ್ತಿದ್ದ ವಿಜಯ್ ಅವರು ಚಿತ್ರರಂಗದಲ್ಲಿ ಕಡಿಮೆ ಅವಧಿಯಲ್ಲೇ ಬಹು ದೊಡ್ಡ ಸಾಧನೆ ಮಾಡುವುದರ ಮೂಲಕ ರಾಷ್ಟ್ರ ಪ್ರಶಸ್ತಿ ಪಡೆದಿದ್ದರು ಎಂದು ವಿಜಯ್ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಕೊಂಡಾಡಿದ್ದಾರೆ.

## ಸಂಚಾರಿ ವಿಜಯ್ ನಿಧನಕ್ಕೆ ಆರ್.ಟಿ. ಸಂತಾಪ

ದಾವಣಗೆರೆ, ಜೂ.14 - ರಸ್ತೆ ಅಪಘಾತದಲ್ಲಿ ದುರ್ಮರಣ ಹೊಂದಿದ ಚಿತ್ರನಟ ಸಂಚಾರಿ ವಿಜಯ್ ಅಗಲಿಕೆಗೆ ಹಿರಿಯ ಕಲಾವಿದ ಆರ್.ಟಿ. ಅರುಣ್ ಕುಮಾರ್ ತೀವ್ರ ವಿಷಾದ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಮನ್ನಣೆಯನ್ನು ಕನ್ನಡ ಚಿತ್ರರಂಗಕ್ಕೆ ದೊರಕಿಸಿಕೊಟ್ಟಿದ್ದ ಪ್ರತಿಭಾವಂತ ನಟ ಸಂಚಾರಿ ವಿಜಯ್ ಸಾಮಾಜಿಕ ಕಳಕಳಿಯ ಅತ್ಯುತ್ತಮ ವ್ಯಕ್ತಿಯಾಗಿದ್ದರು ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

## ಜೈನ್ ಇನ್‌ಸ್ಟಿಟ್ಯೂಟ್ ಪ್ರಾಂಶುಪಾಲರಾಗಿ ಡಾ|| ಡಿ.ಬಿ. ಗಣೇಶ್



ದಾವಣಗೆರೆ, ಜೂ.14 - ಜೈನ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಡಾ|| ಡಿ.ಬಿ. ಗಣೇಶ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಈ ಹಿಂದೆ ಜಿಎಂಐಟಿ ಕಾಲೇಜಿನಲ್ಲಿ ಡೀನ್, ಉಪ ಪ್ರಾಂಶುಪಾಲರಾಗಿದ್ದರು.

## ನಟ ಚೇತನ್ ವಿರುದ್ಧ ಮೊಕದ್ದಮೆ : ಖಂಡನೆ

ದಾವಣಗೆರೆ, ಜೂ.13 - ಕ್ಷುಲ್ಲಕ ಪದ ಬಳಸಿದ ಕಾರಣಕ್ಕೆ ನಟ ಚೇತನ್ ವಿರುದ್ಧ ಮೊಕದ್ದಮೆ ದಾಖಲಿಸಿರುವ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಚಿದಾನಂದಮೂರ್ತಿ ಅವರ ಕ್ರಮ ಸಮಂಜಸವಲ್ಲ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ) ಪ್ರಧಾನ ಕಾರ್ಯದರ್ಶಿ ಕೆ. ರವಿ ತಿಳಿಸಿದ್ದಾರೆ.

## ಪರಿಹಾರ ಘೋಷಣೆ ಸ್ವಾಗತಾರ್ಹ

ದಾವಣಗೆರೆ, ಜೂ.14 - ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ದುಡಿಯುವ ವ್ಯಕ್ತಿ ಕೋವಿಡ್ ರೋಗದಿಂದ ಮೃತಪಟ್ಟಿದ್ದರೆ, ಆಶ್ರಿತ ಕುಟುಂಬಕ್ಕೆ 1 ಲಕ್ಷ ಪರಿಹಾರ ಘೋಷಿಸಿರುವ ಸಿಎಂ ಯಡಿಯೂರಪ್ಪ ಅವರ ಕ್ರಮವನ್ನು ಬಸವಾಪಟ್ಟಣದ ಚಿಂತಕ ಎಲ್.ಜಿ. ಮಧುಕುಮಾರ್ ಸ್ವಾಗತಿಸಿದ್ದಾರೆ.

## ತಿಮ್ಮಣ್ಣ ಸ್ವಾಗತ

ದಾವಣಗೆರೆ, ಜೂ.14 - ಕೊರೊನಾದಿಂದ ಮೃತರಾದ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ನೀಡಬೇಕು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್. ತಿಮ್ಮಣ್ಣ ಒತ್ತಾಯ ಪಡಿಸಿದ್ದರು. ಮನವಿ ಮೇರೆಗೆ ಸಿಎಂ ಯಡಿಯೂರಪ್ಪ ಅವರು ಬಿ.ಪಿ.ಎಲ್. ಕುಟುಂಬಕ್ಕೆ 1 ಲಕ್ಷ ಪರಿಹಾರ ಘೋಷಣೆ ಮಾಡಿರುವುದಕ್ಕೆ ಸ್ವಾಗತಿಸಿದ್ದಾರೆ.

# ಹಸಿದವರಿಗೆ ಅನ್ನ ನೀಡುವುದೇ ನಿಜವಾದ ಧರ್ಮ

## ನ್ಯಾಯವಾದಿ ಅರುಣ್



ದಾವಣಗೆರೆ, ಜೂ.14- ಹಸಿವು ಯಾವುದೇ ಧರ್ಮ, ಜಾತಿ, ವರ್ಗಕ್ಕೆ ಸೀಮಿತವಾಗಿಲ್ಲ. ಕೊರೊನಾದಂತಹ ಸಂದರ್ಭದಲ್ಲಿ ಹಸಿದವರ ನೆರವಿಗೆ ಬಂದವರೇ ನಿಜವಾದ ದೇವತಾ ಮೂರ್ತಿಗಳು. ಅನ್ನ ನೀಡುವುದೇ ನಿಜವಾದ ಧರ್ಮ ಎಂದು ಹಿರಿಯ ನ್ಯಾಯವಾದಿ ಎಲ್.ಹೆಚ್.ಅರುಣ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ನೆರಳು ಬೀಡಿ ಕಾರ್ಮಿಕರ ಯೂನಿಯನ್ ಕಚೇರಿಯ ಮುಂಭಾಗದಲ್ಲಿ ಶ್ರೀ ದುರ್ಗಾಶಕ್ತಿ ಮಹಿಳಾ ಸಂಘದ ದಮನಿತ ಮಹಿಳೆಯರಿಗೆ ದಿನಸಿ ಕಿಟ್ ವಿತರಿಸಿ ಅವರು ಮಾತನಾಡಿದರು.

ಎಲ್ಲಾ ಧರ್ಮಗಳ ತಿರುಳು ಕೂಡ ಹಸಿದವರಿಗೆ ನೆರವಾಗುವುದು. ಇಂತಹ ಸಂಕಷ್ಟದ ಸಂದರ್ಭದಲ್ಲಿ ಹಸಿದವರಿಗೆ ನೆರವಾಗುವ ಕಾಳಜಿ ಇರುವ ಮನಸ್ಸುಗಳು ಬೇಕು. ನಾವುಗಳು ಜಾತಿ, ಧರ್ಮ, ವರ್ಗ ನೋಡದೇ ಸಂಕಷ್ಟದಲ್ಲಿರುವ ಎಲ್ಲರಿಗೂ ನೆರವು ನೀಡಬೇಕೆಂದು ಹೇಳಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷರಾದ ಜಬೀನಾ ಖಾನಂ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಎಂ.ವೈ.ಸತೀಶ್, ಶ್ರೀ ದುರ್ಗಾಶಕ್ತಿ ಮಹಿಳಾ ಸಂಘದ ಅಧ್ಯಕ್ಷೆ ಎಸ್.ಟಿ.ಮಂಜುಳಾ, ಆಪ್ತ ಸಮಾಲೋಚಕ ಗುರು ಸವಣೂರು, ನೆರಳು ಬೀಡಿ ಕಾರ್ಮಿಕರ ಯೂನಿಯನ್ ಪದಾಧಿಕಾರಿಗಳಾದ ಜಬೀವುಲ್ಲಾ ಖಾನ್, ಅನ್ವರ್ ಖಾನ್, ಶಕುಂತಲಾ ಸೇರಿದಂತೆ ಇತರರು ಇದ್ದರು.

## ಚರ್ಮ ಕುಶಲಕರ್ಮಿಗಳಿಗೆ ಪರಿಹಾರ ಧನ

ದಾವಣಗೆರೆ, ಜೂ.14- ಕೋವಿಡ್-19 ರ ಹಿನ್ನೆಲೆಯಲ್ಲಿ ವಾಣಿಜ್ಯ, ಮತ್ತಿತರೆ ಚಟುವಟಿಕೆಗಳಿಗೆ ನಿರ್ಬಂಧಗಳನ್ನು ವಿಧಿಸಿ ಆದೇಶಿಸಿರುವುದರಿಂದ ಪಾದರಕ್ಷೆ ತಯಾರಿಕೆ ಮತ್ತು ದುರಸ್ತಿ ಹಾಗೂ ಚರ್ಮ ಹದ ಮಾಡುವ ಕಾಯಕದಲ್ಲಿ ತೊಡಗಿರುವ ಚಮ್ಮಾರರು, ಚರ್ಮ ಕುಶಲಕರ್ಮಿಗಳು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದು, ಇವರು ತಾತ್ಕಾಲಿಕ ಪರಿಹಾರದ ಧನವಾಗಿ 2 ಸಾವಿರ ರೂ. ಪಡೆಯಲು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಈ ಪರಿಹಾರ ಧನವನ್ನು ಪಡೆಯಲು ಆನ್‌ಲೈನ್ ಮೂಲಕ ಸೇವಾ ಸಿಂಧು sevasindhu.karnataka.gov.in ಪೋರ್ಟಲ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ನಾಳೆ ದಿನಾಂಕ 15 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಲಿಡ್‌ಕರ್ ಜಿಲ್ಲಾ ಸಂಯೋಜಕರು ಅಥವಾ ಲಿಡ್‌ಕರ್ ಪ್ರಧಾನ ಕಚೇರಿಯನ್ನು ಸಂಪರ್ಕಿಸಬಹುದೆಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಗಮದ ಜಿಲ್ಲಾ ಸಂಯೋಜಕರು ತಿಳಿಸಿದ್ದಾರೆ.






# ವಿದ್ಯುತ್ ದರ ಪರಿಷ್ಕರಣೆ ಸಮಂಜಸವಾಗಿಲ್ಲ ಹಾಲಿ ಆಸ್ತಿ ತೆರಿಗೆಯನ್ನೇ ಮುಂದುವರೆಸಬೇಕು

## ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಒತ್ತಾಯ

ದಾವಣಗೆರೆ, ಜೂ.14- ವಿದ್ಯುತ್ ದರಗಳನ್ನು ಪರಿಷ್ಕರಣೆ ಮಾಡಿರುವುದು ನ್ಯಾಯ ಸಮ್ಮತವಾಗಿಲ್ಲ ಎಂದು ಹೇಳಿರುವ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಈ ಪರಿಷ್ಕರಣೆಯನ್ನು ಪುನರ್ ಪರಿಶೀಲಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕೊರೊನಾ ಸೋಂಕು ಅಲೆಯಿಂದಾಗಿ ಜನತೆ ಸಂಕಷ್ಟಕ್ಕೀಡಾಗಿದ್ದು, ಇಂತಹ ವಿಷಮ ಪರಿಸ್ಥಿತಿಯಲ್ಲಿ ವಿದ್ಯುತ್ ಪರಿಷ್ಕರಣೆ ಮಾಡಿರುವುದು ಸಮಂಜಸವಲ್ಲ. ಜೀವನ ನಿರ್ವಹಣೆಯೇ ಕಷ್ಟವಾಗಿರುವಾಗ ಇದನ್ನು ಭರಿಸು ವುದು ದುಸ್ತರವಾಗುತ್ತದೆ ಎಂದು ಛೇಂಬರ್ ಪ್ರತಿಪಾದಿಸಿದೆ.

ಹಾಲಿ ವಿದ್ಯುತ್ ದರಗಳೇ ತುಂಬಾ ಹೆಚ್ಚಾಗಿರುವಾಗ ಪುನಃ ಪರಿಷ್ಕರಣೆ ಕ್ರಮ ಸರಿಯಲ್ಲ. ಕೈಗಾರಿಕೆಗಳು, ಅಂಗಡಿ - ಮುಂಗಟ್ಟುಗಳು ಮುಚ್ಚಿರುವುದರಿಂದ ನಿಗದಿತ ಶುಲ್ಕವನ್ನು ಕಟ್ಟುವುದು ಕಷ್ಟಕರ. ಕಾರಣ, ನಿಗದಿತ ಶುಲ್ಕವನ್ನು ಚಾಲ್ತಿ ಸಾಲಿನಲ್ಲಿ ಸಂಪೂರ್ಣ ಮನ್ನಾ ಮಾಡಬೇಕು ಎಂಬುದು ಜನರ ಅಭಿಪ್ರಾಯವಾಗಿದೆ ಎಂದು ಛೇಂಬರ್ ತಿಳಿಸಿದೆ.

ಜನರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ನಿಗದಿತ ಶುಲ್ಕವನ್ನು ಚಾಲ್ತಿ ಸಾಲಿನಲ್ಲಿ ಮನ್ನಾ ಮಾಡಬೇಕು. ಅಲ್ಲದೇ, ಆಸ್ತಿ ತೆರಿಗೆ ವಿಚಾರವೂ ಅವೈಜ್ಞಾನಿಕವಾಗಿದ್ದು, ಇದನ್ನೂ ಸಹ ಭರಿಸುವುದು ಕಷ್ಟದಾಯಕ ವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಹಾಲಿ ಇರುವ ತೆರಿಗೆಯನ್ನು ಮುಂದುವರೆಸಬೇಕು. ಅದನ್ನು ಕಟ್ಟಲು ದಂಡ ಮತ್ತು ಬಡ್ಡಿ ಇಲ್ಲದಂತೆ ಚಾಲ್ತಿ ಸಾಲಿನ ಕೊನೆಯವರೆಗೂ ಅವಕಾಶ ನೀಡಬೇಕು ಎಂದು ಸರ್ಕಾರವನ್ನು ಛೇಂಬರ್ ವಿನಂತಿಸಿಕೊಂಡಿದೆ.

ಈ ಸಂಬಂಧ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ, ಉಪಾಧ್ಯಕ್ಷ ಮಾಗಾನಹಳ್ಳಿ ನಿಜಾನಂದಪ್ಪ, ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಅವರುಗಳು ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಲಿಖಿತ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

**ಕೃತಜ್ಞತೆ :** ಕೋವಿಡ್ ಕಾರಣದಿಂದ ಆಗಿರುವ ಸಂಪೂರ್ಣ ಲಾಕ್ ಡೌನ್ ಸಂದರ್ಭದಲ್ಲಿ ಆಗಿರುವ ಅನಾನುಕೂಲಕ್ಕೆ ಪರಿಹಾರ ಒದಗಿಸಿಕೊಟ್ಟ ಜಿಲ್ಲಾಡಳಿತಕ್ಕೆ ಛೇಂಬರ್ ಆಫ್ ಕಾಮರ್ಸ್ ಕೃತಜ್ಞತೆ ಸಲ್ಲಿಸಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮಾಡಿಕೊಂಡ ಮನವಿಯನ್ನು ಪುರಸ್ಕರಿಸಿದ ಜಿಲ್ಲಾಡಳಿತವು ಅತ್ಯಾವಶ್ಯಕ ಚಟುವಟಿಕೆಗಳಿಗೆ ಕೆಲವು ಕಟ್ಟುನಿಟ್ಟಿನ ನಿಬಂಧನೆಗಳಪಡಿಸಿ ಅನುಮತಿ ಕೊಡುವುದರ ಮೂಲಕ ಸಹಕಾರ ನೀಡಿದೆ ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಕೃತಜ್ಞತೆ ಪತ್ರದಲ್ಲಿ ಛೇಂಬರ್ ತಿಳಿಸಿದೆ.

ಈ ಸಂಬಂಧ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿದ ಸಂಸ್ಥೆಯ ಉಪಾಧ್ಯಕ್ಷ ಮಾಗಾನಹಳ್ಳಿ ನಿಜಾನಂದಪ್ಪ, ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ಖಜಾಂಚಿ ಟಿ.ಎಸ್. ಜಯರುದ್ರೇಶ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ಎಸ್. ಕೆ. ಶ್ರೀಧರ, ಅಗಡಿ ಮಹಾಂತೇಶ್ ಮತ್ತಿತರರು ಧನ್ಯವಾದ ಹೇಳಿದರು.

# ಆನ್‌ಲೈನ್ ಬಿಟ್ಟು ಅರ್ಜಿಗೆ ಬಂದ ಐ.ಟಿ.



ನವದೆಹಲಿ ಜೂ. 14 – ನೂತನ ಇ-ಫೈಲಿಂಗ್ ಪೋರ್ಟಲ್ ಆರಂಭಿಸಿ ವಾರವಾದರೂ ತೊಡಕುಗಳು ಎದುರಾಗುವುದು ಮುಂದುವರೆದಿದೆ. ಇದರಿಂದಾಗಿ ಆದಾಯ ತೆರಿಗೆ ಇಲಾಖೆ ಕೆಲ ಫಾರಂಗಳನ್ನು ನೇರವಾಗಿ ಸಲ್ಲಿಸಲು ಅವಕಾಶ ನೀಡಿದೆ.

ವಿದೇಶಿ ಹಣ ಪಾವತಿಗಾಗಿ ಸಲ್ಲಿಸಲಾಗುವ 15ಸಿಎ/15ಸಿಬಿ ಅರ್ಜಿಗಳನ್ನು ನೇರವಾಗಿ ಸಲ್ಲಿಸಲು ಅವಕಾಶ ನೀಡಿ ಆದಾಯ ತೆರಿಗೆ ಇಲಾಖೆ ಸುತ್ತೋಲೆ ಹೊರಡಿಸಿದೆ. ಬ್ಯಾಂಕುಗಳಿಗೆ ಈ ಅರ್ಜಿಗಳನ್ನು ಜೂನ್ 30ರವರೆಗೆ ಸಲ್ಲಿಸಬಹುದಾಗಿದೆ. ನಂತರ ಈ ಅರ್ಜಿಗಳನ್ನು ಇ-ಫೈಲಿಂಗ್ ಪೋರ್ಟಲ್‌ಗೆ ದಾಖಲಿಸಲಾಗುವುದು.

ಜೂನ್ 7ರಂದು www.incometax.gov.in ಪೋರ್ಟಲ್ ಆರಂಭಿಸಲಾಗಿತ್ತು. ಐ.ಟಿ. ಸೇವೆಗಳನ್ನು ಸರಳಗೊಳಿಸಲು ಹೊಸ ವ್ಯವಸ್ಥೆ ರೂಪಿಸಲಾಗಿತ್ತು. ಆದರೆ, ನೂತನ ವ್ಯವಸ್ಥೆ ವಾರವಾದರೂ ಸರಿಯಾಗಿಲ್ಲ, ತೆರಿಗೆದಾರರು ರಿಟರ್ನ್ ದಾಖಲಿಸುವುದೂ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕೆಲ ಸೌಲಭ್ಯಗಳು ಶೀಘ್ರದಲ್ಲೇ ಬರಲಿವೆ ಎಂದು ತಿಳಿಸಲಾಗಿದೆ ಎಂದು ಲೆಕ್ಕ ಪರಿಶೋಧಕರು ಹೇಳಿದ್ದಾರೆ.

ಮೇ 31, 2021ರಂದು ಹಳೆಯ ಪೋರ್ಟಲ್ ಬಂದ್ ಮಾಡಲಾಗಿತ್ತು. ಹೊಸ ಪೋರ್ಟಲ್‌ನಲ್ಲಿ ಇದುವರೆಗೂ 15ಸಿಎ ಹಾಗೂ 15ಸಿಬಿ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಸಾಧ್ಯವಾಗಿಲ್ಲ. ಇದು ಉದ್ಯಮಕ್ಕೆ ಸಮಸ್ಯೆ ತಂದಿದೆ. ವಾಣಿಜ್ಯ ಬಾಧ್ಯತೆಗಳನ್ನು ಈಡೇರಿಸಲು ತೊಂದರೆಯಾಗಿದೆ ಎಂದು ನಂಗಿಯಾ ಅಂಡ್ ಕೊ ಎಲ್.ಎಲ್.ಬಿ. ಸಹಭಾಗಿ ಶೈಲೇಶ್ ಕುಮಾರ್ ಹೇಳಿದ್ದಾರೆ.

ಆನ್‌ಲೈನ್ ಮೂಲಕ ಅರ್ಜಿ ದಾಖಲಿಸದೇ ಬ್ಯಾಂಕುಗಳು ವಿದೇಶಿ ಹಣ ಪಾವತಿ ಮಾಡಲು ಬರುವುದಿಲ್ಲ. ಹೀಗಾಗಿ ನೇರವಾಗಿ ಈ ಫಾರಂಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.

ಪೋರ್ಟಲ್ ಆರಂಭಿಸಿದ ಮರು ದಿನವೇ ತೊಡಕುಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಜನರು ದೂರಿದ್ದರು. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪೋರ್ಟಲ್ ರೂಪಿಸಿರುವ ಇನ್ಫೋಸಿಸ್‌ಗೆ ತಿಳಿಸಿದ್ದರು.

ಇದಕ್ಕೆ ಉತ್ತರಿಸಿದ್ದ ಇನ್ಫೋಸಿಸ್ ಅಧ್ಯಕ್ಷ ನಂದನ್ ನಿಲೇಕಣಿ, ತೊಡಕುಗಳನ್ನು ಬಗೆಹರಿಸಲು ಇನ್ಫೋಸಿಸ್ ಕ್ರಮ ತೆಗೆದುಕೊಳ್ಳುತ್ತಿದೆ ಎಂದಿದ್ದರು.

ಇನ್ಫೋಸಿಸ್‌ಗೆ 2019ರಲ್ಲಿ ಮುಂದಿನ ಪೀಳಿಗೆಯ ಐ.ಟಿ. ರಿಟರ್ನ್ ಫೈಲಿಂಗ್ ವ್ಯವಸ್ಥೆ ರೂಪಿಸಲು ತಿಳಿಸಲಾಗಿತ್ತು. ಈ ಮೂಲಕ ರಿಟರ್ನ್ ಪ್ರಕ್ರಿಯೆಯನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿತ್ತು.

ನೂತನ ಪೋರ್ಟಲ್‌ನಲ್ಲಿ 'ಇ-ಪ್ರೊಸೀಡಿಂಗ್ಸ್' ರೀತಿಯ ಟ್ಯಾಬ್‌ಗಳು ಇನ್ನೂ ಸಿದ್ಧವಾಗಿಲ್ಲ. ಹೀಗಾಗಿ ನೋಟಿಸ್‌ಗಳಿಗೆ ಉತ್ತರ ನೀಡದೇ ಹೋದರೆ ಸಮಸ್ಯೆ ಎದುರಾಗುವ ಮತ್ತು ದಂಡ ಎದುರಿಸುವ ಆತಂಕ ತೆರಿಗೆದಾರರಲ್ಲಿ ಉಂಟಾಗಿದೆ.

ನೂತನ ಐ.ಟಿ. ಪೋರ್ಟಲ್ ಗ್ರಾಹಕರ ಸ್ನೇಹಿಯಾಗುವ ಬದಲು, ಕರಾಳ ಸ್ವಪ್ನವಾಗಿದೆ ಎಂದು ಕುಮಾರ್ ಹೇಳಿದ್ದಾರೆ.

ಲಾಗಿನ್ ಸೇರಿದಂತೆ ಸಾಮಾನ್ಯ ವಿಷಯಗಳಿಗೂ ಪೋರ್ಟಲ್‌ನಲ್ಲಿ ಸಮಸ್ಯೆಯಾಗುತ್ತಿದೆ. ಅಸೆಸ್‌ಮೆಂಟ್ ನೋಟಿಸ್‌ಗಳಿಗೆ ಉತ್ತರ ಸಲ್ಲಿಸಲು ಆಗುತ್ತಿಲ್ಲ. ಈ ಹಿಂದೆ ದಾಖಲಾದ ಫೈಲಿಂಗ್ ಮಾಹಿತಿ ಕಂಡು ಬರುತ್ತಿಲ್ಲ. ಹಲವಾರು ಲೋಪದೋಷಗಳಿಂದ ತೆರಿಗೆದಾರರು ಹಾಗೂ ತೆರಿಗೆ ವೃತ್ತಿಪರರಿಗೆ ಸಮಸ್ಯೆಯಾಗುತ್ತಿದೆ ಎಂದು ಎ.ಎಂ.ಆರ್.ಜಿ ಅಂಡ್ ಅಸೋಸಿಯೇಟ್ಸ್ ಹಿರಿಯ ಸಹಭಾಗಿ ರಜತ್ ಮೋಹನ್ ಹೇಳಿದ್ದಾರೆ.

ಪೋರ್ಟಲ್‌ನ ಹೊಸ ಅಂಶಗಳು ಗ್ರಾಹಕ ಸ್ನೇಹಿಯಾಗಿರುವಂತೆ ತೋರುತ್ತಿದೆ. ಆದರೆ, ವೆಬ್ ತಾಣವೇ ನಿಧಾನವಾಗಿದೆ ಹಾಗೂ ಪ್ರೊಫೈಲ್ ಅಪ್ಡೇಟ್ ರೀತಿಯ ಸಣ್ಣ ಕೆಲಸಗಳಿಗೂ ಹೆಚ್ಚು ಸಮಯ ಪಡೆಯುತ್ತಿದೆ. ಪಾಸ್‌ವರ್ಡ್ ಬದಲಿಸುವುದಕ್ಕೆ ಹಲವು ನಿಮಿಷಗಳು ಬೇಕಾಗುತ್ತಿದೆ ಎಂದು ಇನ್ನೊಬ್ಬ ಲೆಕ್ಕ ಪರಿಶೋಧಕರು ಹೇಳಿದ್ದಾರೆ.

# ಅಯೋಧ್ಯೆ : ಮಾರುಕಟ್ಟೆ ಬೆಲೆಗಿಂತ ಕಡಿಮೆ ಮೊತ್ತಕ್ಕೆ ಜಮೀನು ಖರೀದಿ

ಅಯೋಧ್ಯೆ, ಜೂ. 14 – ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪೂರ್ಣ ಪಾರದರ್ಶಕತೆಗೆ ಬದ್ಧವಾಗಿರುವುದಾಗಿ ರಾಮ ಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹೇಳಿದ್ದಾರೆ.

ಈ ನಡುವೆ, ಹೇಳಿಕೆ ನೀಡಿರುವ ಅಯೋಧ್ಯೆಯ ಕೆಲ ಸ್ಥಳೀಯ ಆಸ್ತಿ ಡೀಲರ್‌ಗಳು, ಟ್ರಸ್ಟ್‌ಗೆ ಆಸ್ತಿ ಕಡಿಮೆ ಬೆಲೆಗೆ ದೊರೆತಿದೆ ಎಂದಿದ್ದಾರೆ.

ಮಾರ್ಚ್ ತಿಂಗಳಲ್ಲಿ ಟ್ರಸ್ಟ್ 12 ಸಾವಿರ ಚದುರ ಮೀಟರ್ ಜಾಗ ಖರೀದಿಸಿದೆ. ಟ್ರಸ್ಟ್ ಖರೀದಿಸಿದ ಬೆಲೆಗಿಂತ ಮಾರುಕಟ್ಟೆ ದರ ಮೂರು ಪಟ್ಟು ಹೆಚ್ಚಾಗಿದೆ ಎಂದು ಡೀಲರ್‌ಗಳು ತಿಳಿಸಿದ್ದಾರೆ.

ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಹಣವನ್ನು ಜಮೀನಿಗೆ ಪಾವತಿಸಿಲ್ಲ ಎಂದು ಭಾನುವಾರ ರಾತ್ರಿ ಟ್ರಸ್ಟ್ ಕೇಂದ್ರ ಸರ್ಕಾರಕ್ಕೆ ವಿವರಣೆ ಕಳಿಸಿದೆ ಎಂದು ಮೂಲಗಳು ಹೇಳಿವೆ. ಕೆಲ ರಿಯಲ್ ಎಸ್ಟೇಟ್ ವ್ಯಾಪಾರಿಗಳ ಪ್ರಕಾರ, ಟ್ರಸ್ಟ್ ಪ್ರತಿ ಚದರಡಿಗೆ 5,000 ರೂ.ಗಳ ಬೆಲೆಗೆ ಜಮೀನು ಖರೀದಿಸಿದೆ. ಒಟ್ಟು ಖರೀದಿ ಮೊತ್ತ 18.5 ಕೋಟಿ ರೂ. ಆಗಿದೆ. ಆದರೆ, ಮಾರುಕಟ್ಟೆ ದರ 60 ಕೋಟಿ ರೂ. ಆಗಿದೆ.

# ಹೋಮ : ಅಧಿಕಾರಿಗಳಿಗೆ ನೋಟಿಸ್


ಹೊನ್ನಾಳಿ, ಜೂ.14- ಶಾಸಕ ರೇಣುಕಾಚಾರ್ಯರು ಅರಬಗಟ್ಟೆ ಕೊರೊನಾ ಕೇಂದ್ರದಲ್ಲಿ ಹೋಮ ನಡೆಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರದ ನೋಡಲ್ ಅಧಿಕಾರಿಗಳಿಬ್ಬರಿಗೆ ನೋಟಿಸ್ ಜಾರಿ ಮಾಡಲಾಗಿದ್ದು ಅಲ್ಲಿನ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ತಹಶೀಲ್ದಾರ್ ಬಸವನಗೌಡ ಕೋಟೂರ್ ತಿಳಿಸಿದ್ದಾರೆ.

ನೋಟಿಸ್ ಜಾರಿಮಾಡಿದ ನೂಡಲ್ ಅಧಿಕಾರಿಗಳಾದ ಬಿಇಓ ಹಾಗೂ ಅರಬಗಟ್ಟೆ ವಸತಿ ಕೇಂದ್ರದ ಪ್ರಾಂಶುಪಾಲರುಗಳು ನೀಡುವ ಮಾಹಿತಿಗಳನ್ನು ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಡಲಾಗುವುದು ಎಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿಯವರು ಹೊನ್ನಾಳಿ ತಹಶೀಲ್ದಾರರಿಗೆ ಘಟನೆಗೆ ಸಂಬಂಧಿಸಿದಂತೆ ನೋಟಿಸ್ ಜಾರಿ ಮಾಡುವಂತೆ ಆದೇಶಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

# ಕೊರೊನಾ : ಪಾಲಕರನ್ನು ಕಳೆದುಕೊಂಡ ಮಕ್ಕಳಿಗೆ ಲಯನ್ಸ್‌ನಿಂದ ಉಚಿತ ಶಿಕ್ಷಣ

## ಯುನಿಟಿ ಹೆಲ್ತ್ ಸೆಂಟರ್ ಸಹಯೋಗ - ಡಾ. ಬಿ.ಎಸ್.ನಾಗಪ್ರಕಾಶ್



ದಾವಣಗೆರೆ, ಜೂ.14- ಮನುಷ್ಯ ಸಂಬಂಧಗಳ ನಡುವೆ 'ಅಂತರ' ಸೃಷ್ಟಿಸಿರುವ ಕೊರೊನಾ ಕಾಲಘಟ್ಟದಲ್ಲಿ ಈ ಸೋಂಕುವಿನಿಂದ ಪಾಲಕರನ್ನು ಕಳೆದುಕೊಂಡಿರುವ ದಾವಣಗೆರೆ ಜಿಲ್ಲೆಯ ಅಶಕ್ತ ಮಕ್ಕಳಿಗೆ ನೆರವು ನೀಡುವ ನಿಟ್ಟಿನಲ್ಲಿ ಉಚಿತ ಶಿಕ್ಷಣ ನೀಡಲು ದಾವಣಗೆರೆ ಲಯನ್ಸ್ ಕ್ಲಬ್ ಮುಂದಾಗಿದೆ.

ಜಿಲ್ಲೆಯ ಹಿರಿಯ ವೈದ್ಯರೂ ಆಗಿರುವ ಸಮಾಜ ಸೇವಕ ಡಾ. ಬಿ. ಎಸ್.ನಾಗಪ್ರಕಾಶ್ ಅವರ ಒಡೆತನದ ಯುನಿಟಿ ಹೆಲ್ತ್ ಸೆಂಟರ್ ಸಹಯೋಗ ಮತ್ತು ಲಯನ್ಸ್ ಕ್ಲಬ್‌ನ ಎಲ್ಲಾ ಸರ್ವ ಸದಸ್ಯರ ಸಹಕಾರದೊಂದಿಗೆ ಅಶಕ್ತ ಮಕ್ಕಳ ಸಹಾಯಕ್ಕೆ ಲಯನ್ಸ್ ಕ್ಲಬ್ ಕೈ ಚಾಚಿದೆ.

ಡಾ. ನಾಗಪ್ರಕಾಶ್ ಅವರು ನೀಡುವ ವೈಯಕ್ತಿಕ ಎರಡು ಲಕ್ಷ ರೂ.ಗಳ ಜೊತೆಗೆ, ಇತರೆ ಸದಸ್ಯರು ಕೊಡುವ ಧನ ಸಹಾಯವನ್ನು ಒಟ್ಟುಗೂಡಿಸಿ, ಅಶಕ್ತ ಮಕ್ಕಳ ಅರ್ಜಿಗಳನ್ನು ಆಧರಿಸಿ, ಹಣ ಹಂಚಿಕೆ ಮಾಡಿದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿ, ಅದರ ಬಾಂಡ್ ಪತ್ರವನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತದೆ. ಮಕ್ಕಳು 18 ವರ್ಷವಾದ ಬಳಿಕ ಹಣದ ಲಾಭ ಪಡೆಯಬಹುದಾಗಿದೆ.

ಇಂದಿಲ್ಲಿ ಲಯನ್ಸ್ ಕ್ಲಬ್ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಈ ವಿವರ ನೀಡಿದ ಡಾ. ನಾಗಪ್ರಕಾಶ್, ಮಕ್ಕಳಿಗೆ ಒಂದರಿಂದ ಎಸ್ಸೆಸ್ಸೆಲ್ಸಿ ವರೆಗೆ ಉಚಿತ ಶಿಕ್ಷಣದೊಂದಿಗೆ ಸಮವಸ್ತ್ರ, ಪಠ್ಯ-ಪುಸ್ತಕ ವಿತರಿಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ಅರ್ಹ ಅಶಕ್ತ ಮಕ್ಕಳು ಹೆಚ್ಚಿನ ಮಾಹಿತಿ ಮತ್ತು ಅರ್ಜಿ ಸಲ್ಲಿಕೆಗಾಗಿ ಡಾ. ಬಿ.ಎಸ್.ನಾಗಪ್ರಕಾಶ್, ಯುನಿಟಿ ಹೆಲ್ತ್ ಸೆಂಟರ್, 5ನೇ ತಿರುವು ಪಿ.ಜೆ.ಬಡಾವಣೆ, ದಾವಣಗೆರೆ, (98440-63504) ಅಥವಾ ಎನ್.ವಿ.ಬಂಡಿವಾಡ (94480-43560) ಅಥವಾ ಬೆಳ್ಳೂಡಿ ಶಿವಕುಮಾರ್ (94481-19815) ಅವರನ್ನು ಸಂಪರ್ಕಿಸಬಹುದು.

ಅರ್ಹ ಅಶಕ್ತ ಮಕ್ಕಳು ತಂದೆ-ತಾಯಿ ಕೊರೊನಾ ಸೋಂಕಿವಿನಿಂದ ಮೃತಪಟ್ಟ ಬಗ್ಗೆ ಮರಣ ಪ್ರಮಾಣ ಪತ್ರ, ಬಿಪಿಎಲ್ ಕಾರ್ಡ್, ಆಧಾರ್ ಕಾರ್ಡ್, ಮೊಬೈಲ್ ಸಂಖ್ಯೆ, ಪೂರ್ಣ ವಿಳಾಸ ನೀಡಬೇಕು. ಮಕ್ಕಳ ಆಧಾರ್ ಕಾರ್ಡ್, ಓದುತ್ತಿರುವ ಶಾಲೆ ಮತ್ತು ವಿದ್ಯಾಭ್ಯಾಸದ ದೃಢೀಕರಣ ಪತ್ರ ಸಲ್ಲಿಸಬೇಕು. ಪಾಲಕರಿಂದ ಲಯನ್ಸ್ ಸಂಸ್ಥೆಯಲ್ಲಿ ಉಚಿತ ಶಿಕ್ಷಣ ಪಡೆಯಲು ಒಪ್ಪಿಗೆ ಪ್ರಮಾಣ ಪತ್ರ ತರಬೇಕು. ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿದೆ ಎಂದು ಅವರು ವಿವರಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಓಂಕಾರಪ್ಪ, ಅಜ್ಜಂಪುರ ಶೆಟ್ರು ಮೃತ್ಯುಂಜಯ, ವೈ.ಬಿ.ಸತೀಶ್, ಎನ್.ವಿ.ಬಂಡಿವಾಡ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಮಾಸ್ಕ್ ಧರಿಸದ 299 ಮಂದಿಗೆ ದಂಡ 132 ವಾಹನ ಸೀಜ್

ದಾವಣಗೆರೆ, ಜೂ.14- ಮಾಸ್ಕ್ ಧರಿಸದೇ ಓಡಾಡುತ್ತಿದ್ದವರಿಗೆ ದಂಡದ ಬಿಸಿ ಹಾಗೂ ಅನಾವಶ್ಯಕವಾಗಿ ರಸ್ತೆಗಿಳಿದ ವಾಹನಗಳನ್ನು ವಶಕ್ಕೆ ಪಡೆದು ಸವಾರರಿಗೆ ಚುರುಕು ಮುಟ್ಟಿಸುವ ಕೆಲಸ ಇಂದು ಸಹ ನಡೆಯಿತು.

ಇಂದು ಜಿಲ್ಲೆಯಲ್ಲಿ ಮಾಸ್ಕ್ ಧರಿಸದ 299 ಮಂದಿಯಿಂದ ಒಟ್ಟು 57,950 ರೂ. ದಂಡ ವಿಧಿಸಲಾಗಿದೆ. ಅನಾವಶ್ಯಕವಾಗಿ ರಸ್ತೆಗಿಳಿದ 132 ವಾಹನಗಳನ್ನು ಸೀಜ್ ಮಾಡಲಾಗಿದೆ.

# ರಾಜ್ಯದಲ್ಲಿ 6,835 ಕೊರೊನಾ ಸೋಂಕು

ಬೆಂಗಳೂರು, ಜೂ. 14 – ರಾಜ್ಯದಲ್ಲಿ ಸೋಮವಾರ 6,835 ಜನರು ಕೊರೊನಾ ಸೋಂಕಿಗೆ ಸಿಲುಕಿದ್ದು, 120 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ 15,409 ಜನ ಕೊರೊನಾದಿಂದ ಗುಣಮುಖರಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 1.72 ಲಕ್ಷಕ್ಕೆ ಇಳಿಕೆಯಾಗಿದೆ.

ಪಾಸಿಟಿವ್ ದರ ಶೇ.4.56 ಆಗಿದ್ದರೆ, ಸಾವಿನ ಪ್ರಮಾಣ ಶೇ.1.75 ರಷ್ಟಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ 1,470 ಹೊಸ ಪ್ರಕರಣಗಳು ಕಂಡು ಬಂದಿವೆ. 12 ಜನರು ಸಾವನ್ನಪ್ಪಿದ್ದಾರೆ. ಜೂನ್ 1ರಂದು ನಗರದಲ್ಲಿ 276 ಜನ ಕೊರೊನಾದಿಂದ ಮೃತಪಟ್ಟಿದ್ದರು. ನಂತರದಲ್ಲಿ ಸಾವಿನ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಮೈಸೂರಿನಲ್ಲಿ ಸೋಮವಾರ 670 ಸೋಂಕಿತರು ಕಂಡು ಬಂದಿದ್ದಾರೆ. ಜಿಲ್ಲೆಯಲ್ಲಿ 25 ಸಾವುಗಳು ಸಂಭವಿಸಿವೆ. ಸಾವಿನಲ್ಲಿ ಮೈಸೂರು ಮೊದಲ ಸ್ಥಾನಕ್ಕೆ ಬಂದಿದೆ.




ಜನ್ಮ ದಿನದ ಶುಭಾಶಯಗಳು

ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ
43ನೇ ವಾರ್ಡಿನ
ಮಹಾನಗರ ಪಾಲಿಕೆ ಸದಸ್ಯರಾದ

**ಶ್ರೀಯುತ ಕಲ್ಲಳ್ಳಿ ನಾಗರಾಜ್ ಶಾಮನೂರು**



ಅವರಿಗೆ ಹಾರ್ದಿಕ ಶುಭಾಶಯಗಳು.
ನಾಗರಾಜ್ ಅವರ ರಾಜಕೀಯ ಜೀವನ ಉಜ್ವಲವಾಗಲಿ ಎಂದು ಹಾರೈಸುತ್ತಾ, ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ಕೊಟ್ಟು ಕಾಪಾಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಎಂ.ಡಿ. ಮಾರುತಿ**
ಕಾಂಗ್ರೆಸ್ ಯುವ ಮುಖಂಡರು,
ಶಾಮನೂರು.


# ಕೊರೊನಾ : ವೀರಶೈವ ಸದ್ಬೋಧನಾ ಸಂಸ್ಥೆಯಿಂದ ಹೋಮ



ದಾವಣಗೆರೆ, ಜೂ.14 - ಲೋಕ ಕಲ್ಯಾಣ ಹಾಗೂ ಕೊರೊನಾ ಸೋಂಕು ಕಡಿಮೆಯಾಗಲಿ ಎಂದು ಪ್ರಾರ್ಥಿಸಿ ಶ್ರೀಮದ್ ವೀರಶೈವ ಸದ್ಬೋಧನಾ ಸಂಸ್ಥೆ ವತಿಯಿಂದ ನಗರದ ಶಿವಾಲಿ ಚಿತ್ರಮಂದಿರದ ಬಳಿಯ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮೃತ್ಯುಂಜಯ ಹಾಗೂ ಪ್ರತ್ಯಂಗೀರ ಹೋಮವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಇಂದು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ವೀರಶೈವ ಸದ್ಬೋಧನಾ ಸಂಸ್ಥೆಯ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಕೊರೊನಾ ಮಹಾಮಾರಿಗೆ ತುತ್ತಾಗಿರುವ ಜನರು ಮೃತ್ಯುಂಜಯನ ಕೃಪೆಯಿಂದ ಆರೋಗ್ಯವಂತರಾಗಿ ಸಹಜ ಸ್ಥಿತಿಗೆ ಮರಳಲಿ. ವಿಶ್ವದಲ್ಲಿ ಶಾಂತಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ನಗರ ಪಾಲಿಕೆ ಮಹಾಪೌರ ಎಸ್. ಟಿ. ವೀರೇಶ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ ರಾವ್ ಜಾಧವ್, ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣಪ್ಪ, ಪಾಲಿಕೆ ಸದಸ್ಯರುಗಳಾದ ಶಾಂತಕುಮಾರ್ ಸ್ವಾಗಿ, ಗಾಯತ್ರಿಬಾಯಿ, ಶಿವನಗೌಡ ಟಿ. ಪಾಟೀಲ್, ಸಮಾಜದ ಮುಖಂಡರುಗಳಾದ ಟಿಂಕರ್ ಮಂಜಣ್ಣ, ಮಾಗಿ ಜಯಪ್ರಕಾಶ್, ಶ್ರೀಕಾಂತ ನೀಲಗುಂದ, ಪಿ. ಅಭಿಷೇಕ್, ಗುರುಶಾಂತ ವಿ. ಸ್ವಾಗಿ, ಗಿರೀಶ್ ದೇವರಮನೆ, ಎಳೆಹೊಳೆ ಮಂಜುಳ, ಮಹೇಶ್, ಪುಷ್ಪ ವಾಲಿ, ಶಿವಾನಂದ ಬೆನ್ನೂರು, ಮುತ್ತಣ್ಣ, ಯೊಗೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಅಗಸನಕಟ್ಟೆ ಗ್ರಾಮದ ಎಸ್. ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ವಾಸಿ ಹಾಗೂ ದಾವಣಗೆರೆ ಎಪಿಎಂಸಿ 'ಎ' ಬ್ಲಾಕ್‌ನ ಅಗಸನಕಟ್ಟೆ ಎಸ್. ಶೇಖರಪ್ಪ ಅಂಡ್ ಸನ್ಸ್ ಮಾಲೀಕರಾದ

**ಶ್ರೀ ಎಸ್. ಬಸವರಾಜಪ್ಪ**

ಅವರು ದಿನಾಂಕ 14.6.2021ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 53 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸಹೋದರ-ಸಹೋದರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.6.2021ರ ಸೋಮವಾರ ಸಂಜೆ 4 ಗಂಟೆಗೆ ಅಗಸನಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ ಹಾಗೂ ಅಪಾರ ಬಂಧು-ಮಿತ್ರರು.

ಅಗಸನಕಟ್ಟೆ ಬಸವರಾಜಪ್ಪನವರ ಆತ್ಮಕ್ಕೆ ಚಿರಶಾಂತಿ ಕೋರುವವರು :

**ಎನ್. ಭೀಮಪ್ಪ ಮತ್ತು ಮಕ್ಕಳು, ಶಾಮನೂರು. ಹಾಗೂ ಅಗಸನಕಟ್ಟೆ ಗ್ರಾಮಸ್ಥರು**

# ಚಿಲ್ಲರೆ ಹಣದುಬ್ಬರ ಶೇ.6.3ಕ್ಕೆ ಏರಿಕೆ

ನವದೆಹಲಿ, ಜೂ. 14 – ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ.6.3ರಷ್ಟು ಏರಿಕೆಯಾಗಿದೆ.

ಆಹಾರ ವಸ್ತುಗಳ ಬೆಲೆ ಏರಿಕೆ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂದು ಸರ್ಕಾರಿ ಅಂಕಿ -ಅಂಶಗಳು ತಿಳಿಸಿವೆ.

ಗ್ರಾಹಕರ ಬೆಲೆ ಸೂಚ್ಯಂಕ (ಸಿ.ಪಿ.ಐ.) ಆಧರಿತ ಹಣದುಬ್ಬರ ಏಪ್ರಿಲ್ ತಿಂಗಳಲ್ಲಿ ಶೇ.4.23ರಷ್ಟಿತ್ತು.

ರಾಷ್ಟ್ರೀಯ ಅಂಕಿ - ಅಂಶಗಳ ಕಚೇರಿಯ ಪ್ರಕಟಣೆಯ ಪ್ರಕಾರ, ಆಹಾರ ಹಣದುಬ್ಬರ ಮೇ ತಿಂಗಳಲ್ಲಿ ಶೇ.5.01ರಷ್ಟಿದೆ. ಅದಕ್ಕೂ ಮುಂಚಿನ ತಿಂಗಳಲ್ಲಿ ಆಹಾರ ಹಣದುಬ್ಬರ ಶೇ.1.96ರಷ್ಟಿತ್ತು.

ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿ ರೂಪಿಸುವಾಗ ಚಿಲ್ಲರೆ ಹಣದುಬ್ಬರವನ್ನು ಪ್ರಮುಖವಾಗಿ ಪರಿಗಣಿಸುತ್ತದೆ. ಈ ಹಿನ್ನೆಲೆಯಲ್ಲಿ ಈ ತಿಂಗಳ ಆರಂಭದಲ್ಲಿ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಲಾಗಿತ್ತು.


**ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪನವರು ಮತ್ತು ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು**
ಇವರ ನೇತೃತ್ವದಲ್ಲಿ

ಉತ್ತರ ವಿಧಾನಸಭಾ ಕ್ಷೇತ್ರದ 44ನೇ ವಾರ್ಡ್‌ನ ಹಳೇ ಕುಂದುವಾಡ ಗ್ರಾಮದ ಸಮಸ್ತ ನಾಗರಿಕರಿಗೆ



**2ನೇ ದಿನದ ಉಚಿತ ಕೊರೊನಾ ಲಸಿಕಾ ಶಿಬಿರ**

ದಿನಾಂಕ 14.06.2021 ಹಾಗೂ 15.06.2021
ಮಂಗಳವಾರ ಬೆಳಿಗ್ಗೆ 10 ರಿಂದ
ಲಸಿಕಾ ಶಿಬಿರದ ಸ್ಥಳ : ಹಳೇ ಕುಂದುವಾಡ

ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
ಅವರು ಇಂದು ಮಧ್ಯಾಹ್ನ 12.30 ಕ್ಕೆ
ಲಸಿಕಾ ಶಿಬಿರ ಕೇಂದ್ರಕ್ಕೆ ಭೇಟಿ ನೀಡುವರು.



ನುಡಿದಂತೆ ನಡೆದ ನಾಯಕರುಗಳಿಗೆ ಹಳೇಕುಂದುವಾಡ ಗ್ರಾಮದ ಸಮಸ್ತ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರಿಂದ ಕೃತಜ್ಞತೆಗಳು.

ಬನ್ನಿ, ಎಲ್ಲರೂ ಕೈ ಜೋಡಿಸೋಣ, ಕೊರೊನಾ ಎದುರು ಜಯ ಸಾಧಿಸೋಣ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte